ಆದ್ದರಿಂದ ನಮ್ಮ ಮೈಸೂರು ರಾಜ್ಯದಲ್ಲಿ 10 ಎಕರೆಗಿಂತ ಹೆಚ್ಚಾಗಿ ಬಿಟ್ಟುಕೊಡಬೇಕಾಗುತ್ತದೆ ಎಂದು ಸ್ವಾಭಾವಿಕವಾಗಿ ಅರ್ಥ ಮಾಡಿಕೊಳ್ಳುವುದಕ್ಕೆ ಅವಕಾಶ ಇದೆ. ಇದು ಬಿಟ್ಟು ತಾವು ಫಾರಿನ್ ಕಂಟ್ರೀಸ್ ಲೆಕ್ಕ ತೆಗೆದುಕೊಂಡರೆ ಅದನ್ನು ಪುನ್ಕದ ಬದನೆಕಾಯಿ ರೂಪದಲ್ಲಿ ಬರೆದು ಇಟ್ಟಿದ್ದಾರೆ.. ತಾವು ನಮ್ಮ ದೇಶದ ಮಣ್ಣಿನ ಪರಿಸ್ಥಿತಿ, ಹವಾಮಾನದ ಪರಿಸ್ಥಿತಿ ಲೆಕ್ಕಾಚಾರ ಹಾಕಿಲ್ಲ, ಅಮೇರಿಕಾ ದೇಶದಲ್ಲಿ ಹೆಚ್ಚು ಜಮೀನು ಇದ್ದು ಕೂಡ ಅವರು ಆಹಾರ ಧಾನ್ಯದ ಉತ್ಪಾದನೆ ಬಗ್ಗೆ ಯಾವ ರೀತಿ ಸಂಶೋಧನೆ ನಡೆಸುತ್ತಿದ್ದಾರೆ ಎನ್ನುವುದು ಗೊತ್ತಿದೆಯೋ? ಅವರು ತಮಗೂ ಆಗಿ ಪರದೇಶಗಳಿಗೂ ಆಹಾರಧಾನ್ಯಗಳನ್ನು ಕಳುಹಿಸಿ ಕೊಡುವುದಕ್ಕೆ ಸಿದ್ಧರಾಗಿದ್ದಾರೆ. ಅದನ್ನು ತಾವು ಯೋಚನೆ ಮಾಡಿಲ್ಲಾ. ಈಗ ಭೂಸುಧಾರಣೆ ಬಗ್ಗೆ ಪ್ರಸ್ತಾಪ ತಂದಿದ್ದೀರಿ. ಈಗ 2 ಜೆಳೆ ಆಗತಕ್ಕಂಥಾದ್ದು 10 ಎಕರೆಯನ್ನು ಒಬ್ಬ ರೈತ ಇಟ್ಟುಕೊಳ್ಳಬಹುದು ಎಂದು ಹೇಳಿದಮೇಲೆ ದೇಶದಲ್ಲಿ ಆಹಾರ ಬೆಳೆಯ ಎಷ್ಟು ಎಷ್ಟು ಕಡಿಮೆಯಾಗಿದೆ ಎನ್ನುವುದನ್ನು ನೋಡಿ. ಈಗ ದೇಶದಲ್ಲಿ ಬಂದಿರತಕ್ಕಂಥ ಫುಡ್ ಪ್ರಾಬ್ಲಮ್ಸ್‌ನಿಂದ ಈ ಅಂಕಿಸಂಖ್ಯೆ ಗೊತ್ತಾಗುತ್ತದೆ. ಒಂದು ವರ್ಷದ ಹಿಂದೆ ನಾನು ತಾಲ್ಲೂಕು ಸೊಸೈಟಿ ಪ್ರೆಸಿಡೆಂಟ್ ಆಗಿದ್ದೆ. ಆವಾಗ ನಮ್ಮ ಹತ್ತಿರ ಸುಮಾರು 3000 ಕ್ವಿಂಟಾಲ್ ಅಷ್ಟು ಇದ್ದ ಭತ್ತವನ್ನು ಸರ್ಕಾರದವರು ಬಡವರಿಗೆ ಮಾರಾಟ ಮಾಡಿದ್ದಾರೆ. ಕೇವಲ ಒಂದು ವರ್ಷದಲ್ಲಿ ಈ ರೀತಿ ಒಂದು ಫುಡ್ ಪ್ರಾಬ್ಲೆಮ್ಸ್‌ಗೆ ತೊಂದರೆ ಆಗಿರುವುದಕ್ಕೆ ಕಾರಣ ಏನು ಎನ್ನುವುದು ಗೊತ್ತಾಗುತ್ತದೆ.

DISCUSSION ON A MATTER OF URGENT PUBLIC IMPORTANCE FOR SHORT DURATION

re : Irregularities in regard to Cultural Activities as part of Dasara Celebrations at Mysore:

Mr. DEPUTY SPEAKER.—We shall continue the discussion tomorrow. We shall go to the next item of the agenda, *viz.*, "Discussion on matter of urgent public importance for short duration under Rule 59.

Sri H. SIDDAVEERAPPA.—Will that be in order to go to the next item on the agenda ?

Mr. DEPUTY SPEAKER.—I have already told my difficulty.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜಪೇಟೆ).—ಸನ್ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಸಾರಿಗೆ ಮಂತ್ರಿಗಳು ದಯಮಾಡಿಸಿದ್ದಾರೆ. ಇದು ಮುಖ್ಯಮಂತ್ರಿಗಳಿಗೂ ಸಂಬಂಧಪಟ್ಟದ್ದೆ. ರಾ ಅಂಡ್ ಅರ್ಡರ್ ಪ್ರಾಬ್ಲಮ್ ಬರುತ್ತದೆ ಪೋಲೀಸ್ ಇಲ್ಲಿ ಬರುತ್ತದೆ. ಇವರಿಗಿಂತ ಜಾಸ್ತಿ ಮುಖ್ಯಮಂತ್ರಿಗಳದ್ದು ಇದೆ. ಏತಕ್ಕೆ ಅವರು ಬರಲಿಲ್ಲ ? ಬೇರೆ ಕೆಲಸ ಇರಬೇಕೆಂದು ಕಾಣುತ್ತದೆ. ಮಾನ್ಯ ಅಧ್ಯಕ್ಷರೇ, ಇಡೀ ರಾಜ್ಯದ ಜನತೆ ಒಂದು ರೀತಿಯಲ್ಲಿ ತಳಮಳಕ್ಕೆ ಒಳಗಾದಂತ ಪ್ರಾಮುಖ್ಯ ವಾದಂತಹ ಪ್ರಶ್ನೆ ಇದು. ಇದು ನತ್ಯಾಂಶವಾದ ಪ್ರಶ್ನೆ. ಬಹುಶಃ ದಸರಾ ಉತ್ಸವ ತಾವು ಕೇಳಿದ್ದೀರಿ. ಅದು ನಡೆದಂತಹ ವೈಖರಿ, ಭೂಷಣ ಎಲ್ಲಾ ತಾವು ನೋಡಿದ್ದೀರಿ. ಬಹುಶಃ ದಸರಾ ಸಮಿತಿಯಲ್ಲಿ ಒಂದು ಉಪಸಮಿತಿ ಯಾವಾಗಲೂ ಮಾಡತಕ್ಕದ್ದು ಇದೆ. ಕಲೆಗೋಸ್ಕರ ಸಂಬಂಧಪಟ್ಟದ್ದು. ಸಾಂಸ್ಕೃತಿಕವಾಗಿ ಏರ್ಪಡಿಸತಕ್ಕ ಕಾರ್ಯಕ್ರಮವನ್ನು ಏರ್ಪಡಿಸುವುದಕ್ಕೆ ಒಬ್ಬರ ಮೇಲೆ ಜವಾಬ್ದಾರಿಯನ್ನು ಹೊರೆಸಿ, ಒಬ್ಬ ಅಧ್ಯಕ್ಷರನ್ನು ನಾಮಕರಣ ಮಾಡತಕ್ಕದ್ದು ಮೊದಲಿನಿಂದ ನಡೆದು ಬಂದ ಪದ್ಧತಿ. ಈ ಪದ್ಧತಿ ಬಗ್ಗೆ ನನ್ನದು ಆಕ್ಷೇಪಣೆ ಇಲ್ಲ. ಯಾರು ಅಧ್ಯಕ್ಷರು ಆಗಬೇಕು ಎನ್ನುವ ವಿಷಯದಲ್ಲಿ ನನ್ನದು ಪ್ರಮುಖವಾದ ಆಕ್ಷೇಪಣೆ ಮೊದಲು ಹೇಳಿಬ್ಬೇನೆ. ಅಲ್ಲಿ ನಡೆದ ಘ ದುರಂತ ಘಟನೆ ಹೇಳುತ್ತೇನೆ. ಹಿಂದೆ ಈ ಸಮಿತಿಯಲ್ಲಿರತಕ್ಕ ಸದಸ್ಯರುಗಳು ಮತ್ತು ಅಧ್ಯಕ್ಷರು ಯಾರು ಇರುತ್ತಿದ್ದರೋ ಅವರು ಸಂಪೂರ್ಣವಾಗಿ ನೂರಕ್ಕೆ 70 ಭಾಗ ಕಲಾವಿದರು ಇರುತ್ತಿದ್ದರು. ಅನೇಕ ಜನ ದೊಡ್ಡ ದೊಡ್ಡ ಹಿರಿಯ ಕಲಾವಿದರು ಅಂದರೆ ಗುಬ್ಬಿವೀರಣ್ಣ, ಚೌಡಯ್ಯ, ದೇವೇಂದ್ರಪ್ಪ ಇವರುಗಳು ಇದ್ದರು ಇವರೆಲ್ಲರೂ ಕಲಾವಿದರು. ಇದು 100ಕ್ಕೆ ನೂರು

(ಶ್ರೀ ವಾಟಾಳ್ ನಾಗರಾಜ್)

ಕರಾವಿದರು ಇರುವ ಸಮಿತಿ. ಕಲೆಯ ಗಂಧವೇ ಗೊತ್ತಿಲ್ಲದ ನಮ್ಮ ನಾಡಿನ ಸಾಹಿತ್ಯವನ್ನು, ಸಂಸ್ಕೃತಿಯನ್ನು ತಿಳಿಯದ ಒಬ್ಬ ವ್ಯಾಪಾರಸ್ಥ, ಅದರಲ್ಲೂ ಒಬ್ಬ ಸೀಮೆಎಣ್ಣೆ ಏಜೆಂಟ್ ಆಗಿದ್ದ ವರನ್ನು ಇದರ ಅಧ್ಯಕ್ಷರನ್ನಾಗಿ ನೇಮಕ ಮಾಡಿದರು. ಅವರು ಸೀಮೆಎಣ್ಣೆಗೆ ಲೈಸೆನ್ಸ್ ಇಲ್ಲದೆ ಮಾರಿ ಇದೇ ಸಭೆಯಲ್ಲಿ ದೊಡ್ಡ ರಂಪವಾಗಿತ್ತು.

Mr. DEPUTY SPEAKER.—I have gone through the notice. It refers to the irregularities that have occurred in regard to the cultural activities as part of the Dasara Celebrations during this year.

ಶ್ರೀ ಎಚ್. ಡಿ. ದೇವೇಗೌಡ.—ಈ ಒಂದು ಕಲೆಯಲ್ಲಿ ಅಭಿರುಚಿ ಇಲ್ಲದೆ ಇರುವ ಸೀಮೆಎಣ್ಣೆ ವ್ಯಾಪಾರಗಾರರನ್ನು ನೇಮಕ ಮಾಡಿಬ್ಬಾರೆಂದು ಹೇಳುತ್ತೇನೆ.

Mr. DEPUTY SPEAKER.—Let us restrict the discussion to the scope of the notice.

† ಶ್ರೀ ವಾಟಾಳ್ ನಾಗರಾಜ್.—ಶ್ರೀ ಕೆ. ಕೆ. ಮೂರ್ತಿ ಯಾರು ಎಂದು ಹೇಳಬೇಕು. ಈ ಸಭೆಯಲ್ಲಿ ಯಾವ ವ್ಯಕ್ತಿಯ ಮೇಲೆ ಗುರುತರವಾದ ಆಪಾದನೆಗಳನ್ನು ಮಾಡಿ ಅವರು ಬ್ಲಾಕ್ ಮಾರ್ಕೆಟೀಯರು, ನಿಜವಾಗಿ ಅಪರಾಧಿ ಸ್ಥಾನದಲ್ಲಿ ಇರತಕ್ಕವರು, ಅದಕ್ಕೆ ಅರ್ಹರೇ ಹೊರತು ಯಾವುದೇ ವಿಧವಾದ ಗೌರವ ಸ್ಥಾನವನ್ನು ಅಲಂಕರಿಸುವುದಕ್ಕೆ ಅವರಿಗೆ ಯೋಗ್ಯತೆಯಿಲ್ಲ ಎನ್ನುವ ಧಾಟಿಯಲ್ಲಿ ಇದೇ ಸಭೆಯಲ್ಲಿ ನುಮಾರು ದಿನಗಟ್ಟಲೆ ಚರ್ಚೆ ನಡೆಯಿತು. ಕೊನೆಗೂ ಸರ್ಕಾರ ಇಂಥ ಒಬ್ಬ ಬ್ಲಾಕ್ ಮಾರ್ಕೆಟೀಯರನ್ನು ಎನ್‌ಕರೇಜ್ ಮಾಡಿ ಇಲ್ಲಿ ಈ ರೀತಿಯ ಬೆಂಬಲ ಕೊಟ್ಟು ಸರ್ಕಾರ ರಕ್ಷಣೆ ಮಾಡತಕ್ಕ ಉದ್ದೇಶವಾದರೂ ಏನು ಇದೆ ಎಂದು ಕೇಳುತ್ತೇನೆ. ಯಾವ ಉದ್ದೇಶದಿಂದ ಅವರನ್ನು ರಕ್ಷಣೆ ಮಾಡುತ್ತಿದ್ದೀರಿ, ಇದಕ್ಕೆ ಯಾರು ಜವಾಬ್ದಾರಿ ಎಂದು ನಾನು ನೇರ ಪ್ರಶ್ನೆ ಮುಖ್ಯಮಂತ್ರಿಗಳನ್ನು ಕೇಳುತ್ತಿದ್ದೆ. ಅವರು ಈ ಸಭೆಯಲ್ಲಿ ಇಲ್ಲ. ಇದಕ್ಕೆ ಎಂಚ್ಯೋರ್ ರಸ್‌ಪಾನ್ಸಿಬಿಲಿಟಿ ಮುಖ್ಯಮಂತ್ರಿಗಳದ್ದು ಎಂದು ಹೇಳುತ್ತೇನೆ. ಏನು ಆ ಮನುಷ್ಯನ ಕ್ವೆಯ್ಯಲ್ಲಿ 10 ಜನ ಎಂ.ಎಲ್.ಎ. ಗಳು ಇದ್ದಾರೆಯೋ ಅವರಿಂದ ಓಟು ಬೇಕು ಎಂದು ಅವರನ್ನು ಪ್ರಮುಖವಾದ ವ್ಯಕ್ತಿ ಮಾಡುತ್ತಿದ್ದೀರಾ ? ಅವರು ನಾಡಿಗೆ ಸೇವೆಯನ್ನು ಮಾಡಿದ್ದಾರೆಯೇ ?

ಶ್ರೀ ಎಂ. ಎಸ್. ಕೃಷ್ಣನ್.—ಅನೇಕ ಎಂ.ಎಲ್.ಎ. ಗಳು ಅವರ ಜೇಬಿನಲ್ಲಿದ್ದಾರೆಂದು ತಿಳಿದುಕೊಂಡಿದ್ದೇನೆ.

ಶ್ರೀ ವಾಟಾಳ್ ನಾಗರಾಜ್.—ವೈಯಕ್ತಿಕವಾಗಿ ನಾವು ಅವರ ಶತ್ರುಗಳು ಎನ್ನುವ ಪ್ರಶ್ನೆಯಿಲ್ಲ ಕೆ. ಕೆ. ಮೂರ್ತಿಯಂತಹವರನ್ನು ಅನೇಕರನ್ನು ನಾನು ನೋಡಿದ್ದೇನೆ. ಇನ್ನು, ಅನೇಕ ಸರ್ಕಾರಗಳು ಬಂದವು ಅನೇಕ ಸರ್ಕಾರಗಳು ಹೋದವು, ಆದರೂ ಶ್ರೀ ಕೆ. ಕೆ. ಮೂರ್ತಿಯವರನ್ನು ಇಷ್ಟು ಪ್ರಭಾವಶಾಲಿಯಾಗಿ ಬೆಳೆಸುವುದಕ್ಕೆ ಹಿನ್ನೆಲೆ ಏನು ? ಅವರ ಚಾರಿತ್ರ ಏನು ? ಅವರ ಗುಣಗಳು ಏನು ? ಯಾವ ಯಾವ ಗುಣಗಳಿಂದ ನೀವು ಪಿಚಲತರಾಗಿದ್ದೀರಿ ? ಶ್ರೀ ಕೆ. ಕೆ. ಮೂರ್ತಿಯವರನ್ನು ಒಬ್ಬ ದೊಡ್ಡ ಮನುಷ್ಯ ಎಂದು ಬೆಳೆಸುತ್ತಿದ್ದೀರಿ. ಈ ಮನುಷ್ಯ ಸರಿಯಿಲ್ಲ. ಸಮಾಜದಲ್ಲಿ ಈ ಮನುಷ್ಯನನ್ನು ತೆಗಳಬೇಕು ಎಂದು ಹೇಳಿದಂತಹ ಜನ ಇಲ್ಲ ಇದ್ದೇವೆ. ಅಂಥಾದ್ದರಲ್ಲೂ ಈ ಮನುಷ್ಯನನ್ನು ಬೆಳೆಸುವುದಕ್ಕೆ ಅವನು ನಿಮಗೆ ತೋರಿಸಿರತಕ್ಕ ಆಸೆಗಳು ಯಾವುವು ? ಅಶೋತ್ತರಗಳು ಯಾವುವು ? ಆ ಆಸೆಯ ಗುಣಗಳು, ಚಿತ್ರಗಳು ಏನೇನು ? ಯಾವ ಯಾವ ನಂದರ್ಭದಲ್ಲಿ ಆ ಆಸೆಗಳು ಈಡೇರಿದವು ? ಯಾರು ಯಾರು ಆಸೆಗಳನ್ನು ಅವರಿಂದ ಅನುಭವಿಸಿದ್ದೀರಿ ? ನಿಮ್ಮ ಮನವನ್ನು ಮುಟ್ಟಿ ನೋಡಿಕೊಳ್ಳಿ. ಯಾರು ಯಾರು ಯಾವ ಯಾವ ಆಸೆಗಳನ್ನು ಈಡೇರಿಸಿಕೊಳ್ಳುವುದಕ್ಕೆ, ಯಾವ ಯಾವ ಚಟಗಳನ್ನು ತೀರಿಸಿಕೊಳ್ಳುವುದಕ್ಕೆ ಈ ಒಂದು ನೀತಿಗೆಟ್ಟ ಕಾರ್ಯಕ್ಕೋಸ್ಕರವಾಗಿ ಇಂತಹ ಒಬ್ಬ ಮನುಷ್ಯನನ್ನು ಸರ್ಕಾರ ಬೆಳೆಸತಕ್ಕದ್ದು ನ್ಯಾಯವೇ ಎಂದು ಒಂದು ಪ್ರಶ್ನೆ ಕೇಳುತ್ತೇನೆ. ಎರಡನೇ ಪ್ರಶ್ನೆ..... .....

Mr. DEPUTY SPEAKER.—The Hon. Member may please just refer to the notice. I have also got it examined again and again. I have requested you to just refer to that committee and to the Dasara Festivities and nothing more than that.

ಶ್ರೀ ವಾಟಾಳ್ ನಾಗರಾಜ್.— ಮೂರ್ತಿಯ ಮೇಲೆ ನಾಗರಾಜ್ ಯಾವಾಗಲೂ ಆರೋಪಣೆ ಮಾಡುತ್ತಾ ಇರುತ್ತಾನೆ ಎಂದು ಜನ ತಿಳಿದುಕೊಳ್ಳಬಹುದು. ನಮಗೆ ಅವರ ಮೇಲೆ ವೈಯಕ್ತಿಕವಾದ ದ್ವೇಷ ಅಥವಾ ವೈಯಕ್ತಿಕವಾದ ಯಾವ ಶತ್ರುತ್ವ ಇಲ್ಲ. ನಾನು ಮಂತ್ರಿಯಾಗುವುದನ್ನು ಅವರು ತಪ್ಪಿಸಿಲ್ಲ. ಲೈಸೆನ್ಸ್ ಬೇಕಾದರೆ ತಡೆಯುವ ಹಾಗೆ ಮಾಡಿಲ್ಲ.

[MADAM SPEAKER in the Chair.]

ಅಧ್ಯಕ್ಷರು.— ಈಗ ಏನು ಸಬ್ಜೆಕ್ಟ್ ಇದೆ ಅದರ ಮೇಲೆ ಮಾತನಾಡಿ. ಬಾಕಿ ವಿಚಾರಕ್ಕೆ ಹೋದರೆ ಅದನ್ನು ಬರೆದುಕೊಳ್ಳಕೂಡದು ಎಂದು ಹೇಳಬೇಕಾಗಿ ಬರುತ್ತದೆ. ಸಬ್ಜೆಕ್ಟ್ ಏನು ಇದೆ ಅದಕ್ಕೆ ಸಂಬಂಧಪಟ್ಟ ಹಾಗೆ ಮಾತನಾಡಿ.

ಶ್ರೀ ವಾಟಾಳ್ ನಾಗರಾಜ್.—ಆದುದರಿಂದ ಶ್ರೀಮಾನ್ ಕೆ. ಕೆ. ಮೂರ್ತಿಯವರನ್ನು ಅಧ್ಯಕ್ಷರನ್ನಾಗಿ ಮಾಡಿದ್ದು ಏನಿದೆ ಇದು ಸರಿಯಾದುದಲ್ಲ. ನಾಡಿನಲ್ಲಿ ಬೇಕಾದಷ್ಟು ಜನ ಕಲಾವಿದರು ಇದ್ದಾರೆ. ಸಂಗೀತದಲ್ಲಿ, ಸಾಹಿತ್ಯದಲ್ಲಿ, ಸಂಸ್ಕೃತಿಯಲ್ಲಿ ಇನ್ನು ಅನೇಕ ರಂಗದಲ್ಲಿ ದುಡಿದಂತಹ ಅನೇಕ ಕಲಾವಿದರು ಇದ್ದಾರೆ. ಅವರ ಹೆಸರುಗಳು ಯಾರಿಗೂ ಇವರ ಕಣ್ಣಿಗೆ ಕಾಣಲಿಲ್ಲ ಕೆ. ಕೆ. ಮೂರ್ತಿಯವರು ಯಾತಕ್ಕೆ ಇವರಿಗೆ ಬೇಕಾದವರು ಆದರು ? ಅನೇಕನಲ ಮುಖ್ಯ ಮಂತ್ರಿಗಳಲ್ಲಿ ಮನವಿ ಮಾಡಿದ್ದೇನೆ. ಕೆ. ಕೆ. ಮೂರ್ತಿಗಳಿರುವುದು ಒಳ್ಳೆಯದಲ್ಲ ಎಂದು ಶ್ರೀಮಾನ್ ಅರಸ್‌ರವರನ್ನು ಕೈಮುಗಿದು ಪ್ರಾರ್ಥನೆ ಮಾಡಿದ್ದೇನೆ.

ಒಬ್ಬ ಸದಸ್ಯರು.—ಪಾಯಿಂಟ್ ಆಫ್ ಆರ್ಡರ್. ಇಲ್ಲಿ ಶ್ರೀಮಾನ್ ಕೆ. ಕೆ. ಮೂರ್ತಿಯವರು ಈ ಸಭೆಯ ಸದಸ್ಯರು ಅಲ್ಲ. ಅವರ ಹೆಸರನ್ನು ಎತ್ತುವುದು ಸರಿಯಾದುದಲ್ಲ. ದಯವಾಡಿ ಸ್ಪೀಕರ್‌ರವರನ್ನು ಕೇಳಿಕೊಳ್ಳುತ್ತೇನೆ ಇದನ್ನು ರೆಕಾರ್ಡ್‌ನಿಂದ ಎಕ್ಸ್‌ಪಂಜ್ ಮಾಡಬೇಕು.

ಅಧ್ಯಕ್ಷರು.—ಶ್ರೀಮಾನ್ ಕೆ. ಕೆ. ಮೂರ್ತಿಯವರು ಥೇರ್‌ಮನ್ ಆಗಿದ್ದಾರೆ. ಆದ್ದರಿಂದ ಹೆಸರು ಬಳಸಿದ್ದಾರೆ. ತಾವು ಮುಂದೆ ಥೇರ್‌ಮನ್ ಎಂದು ಹೇಳಿ ಮಾತನಾಡಿ.

ಶ್ರೀ ವಾಟಾಳ್ ನಾಗರಾಜ್.—ಈ ಅಧ್ಯರ ಮೇಲೆ ಗುರುತರವಾದ ಆಪಾದನೆಗಳನ್ನು ನಾವು ಇದೇ ಶಾಸನ ಸಭೆಯಲ್ಲಿ ಮಾಡಿದ್ದು ಉಂಟು.

ಅವರ ಬಗ್ಗೆ ಅನೇಕ ವಿಚಾರಗಳು ಈ ಸಭೆಯಲ್ಲಿ ಬಂದಿವೆ. ಈಗ ಒಂದನ್ನು ಪ್ರಶ್ನೆ ಮಾಡುತ್ತೇನೆ. ಅಧ್ಯಕ್ಷರಾಗಿದ್ದವರು, ನಮ್ಮ ನಾಡಿನ ಕಲಾವಿದರ ಬಗ್ಗೆ, ಮತ್ತು ಹೊರನಾಡಿನ ಕಲಾವಿದರ ಬಗ್ಗೆ ತೋರಿಸಿರತಕ್ಕ ತಾರತಮ್ಯ, ಇಲ್ಲಿಯ ಕಲಾವಿದರನ್ನು ಕಡೆಗಾಣಿಸಿ, ಹಿರಿಯ ಕಲಾವಿದರ ಬಗ್ಗೆ ತುಚ್ಛವಾಗಿ ಮಾತನಾಡಿ ಅವರು ಕಣ್ಣೀರು ಇಟ್ಟಿರತಕ್ಕ ಪ್ರಸಂಗಗಳು ನಡೆದಿವೆ. ನಮ್ಮ ಕಲಾವಿದರಿಗೆ ಕೊಟ್ಟಿರತಕ್ಕ ಸಂಭಾವನೆ ನೂರಾರು ಜಾಸ್ತಿ ಎಂದರೆ, ಕೇವಲ ಎರಡು ಸಾವಿರ ರೂಪಾಯಿಗಳು. ನೆರೆ ರಾಜ್ಯದ ಕಲಾವಿದರಿಗೆ, ಹೇಮಮಾಲಿನಿ, ಮುಕೇಶ್, ಮುಂತಾದವರಿಗೆ ಐದು ಸಾವಿರದಿಂದ 24 ಸಾವಿರ ರೂಪಾಯಿಗಳವರೆಗೂ ಸಂಭಾವನೆಯನ್ನು ಕೊಟ್ಟಿದ್ದಾರೆ. ಇವರು ನಮ್ಮ ರಾಜ್ಯದ ಕಲೆಯನ್ನಾಗಲಿ, ನಮ್ಮ ರಾಜ್ಯದ ಸಂಸ್ಕೃತಿಯನ್ನಾಗಲೀ ಪ್ರತಿಬಿಂಬಿಸತಕ್ಕದ್ದು ಏನೂ ಇರಲಿಲ್ಲ. ಇವರನ್ನು ಕರೆದುಕೊಂಡು ಬಂದು ಮೈಸೂರಿನ ಕ್ರಾಫರ್ಡ್ ಹಾಲ್‌ನಲ್ಲಿ 25 ರೂಪಾಯಿ ಟಿಕೆಟ್ ಇಟ್ಟು, ಕುಣಿಸಿ, ಇದರಿಂದ ಸಂಪಾದಿಸತಕ್ಕದ್ದು ಏನೂ ಇರಲಿಲ್ಲ. ಏನಾದರೂ ಈ ನಾಡಿನ ಸಂಸ್ಕೃತಿಯನ್ನು, ಸಾಹಿತ್ಯವನ್ನು, ಕಲೆಯನ್ನು ಪ್ರತಿಬಿಂಬಿಸತಕ್ಕದ್ದಕ್ಕೆ ನಮ್ಮ ಸಾಮರ್ಥ್ಯವನ್ನು ಉಪಯೋಗಿಸಬೇಕೇ ಹೊರತು, ಹೊರಗಡೆಯವರನ್ನು ಕರೆಸಿ ಸಂಪಾದನೆ ಮಾಡುವುದಕ್ಕೆ ಅಲ್ಲ. ಹೊರಗಡೆಯ ಕಲಾವಿದರನ್ನು ಕರೆದುಕೊಂಡು ಬರುವ ಖರ್ಚು ಅಷ್ಟೂ ಮಾನ್ಯ ಅಧ್ಯಕ್ಷರದ್ದು. ಬೊಂಬಾಯಿಯಲ್ಲಿ ಸುಮಾರು ಹದಿನೈದು ಸಾವಿರ ರೂಪಾಯಿಗಳು, ಇವರನ್ನು ಕರೆದುಕೊಂಡು ಬರುವಾಗ್ಗೆ ಖರ್ಚಾಗಿದೆ. ಅಲ್ಲಿಗೆ ಹೋದಾಗ, ಒಂದು ದೊಡ್ಡ ಪಾರ್ಟಿಯನ್ನು ಕೊಟ್ಟಿದ್ದು ಯಾರು ಎಂದರೆ, ನಮ್ಮ ರಾಜ್ಯದ ಮಾಂಡ್ಯೆಯವರು. ಅಲ್ಲಿ ಅಧ್ಯಕ್ಷರ ಕೆಲಸ, ಕಲಾವಿದರ ಕೈಕಾಲುಗಳನ್ನು ಕಟ್ಟಿ ಅವರನ್ನು ಕರೆದುಕೊಂಡು ಬರುವುದಾಗಿತ್ತು.

ಅಧ್ಯಕ್ಷರು.—ನೀವು ನೋಡಿದಿರಾ ?

ಶ್ರೀ ವಾಟಾಳ್ ನಾಗರಾಜ್.—ಸ್ಟಾರ್ ಅಂಡ್ ಲೈಫ್ ಪತ್ರಿಕೆಯಲ್ಲಿ ಬೊಂಬಾಯಿಯಲ್ಲಿ ನಡೆದಂಥ ಎಲ್ಲಾ ಫೋಟೋಗಳನ್ನು ಸುಂದರವಾಗಿ ಅಚ್ಚು ಮಾಡಿದ್ದಾರೆ. ಅದಾದನಂತರ ಸುಮಾರು ಎಲ್ಲಾ ಕಾರ್ಯಕ್ರಮವನ್ನು ಅವರ ಇಚ್ಛೆ ಬಂದಹಾಗೆ, ಲಂಗು ಲಗಾಮು ಇಲ್ಲದೆ ಗುರುತು ಮಾಡಿ ಹೊರಗಡೆಯ ಕಲಾವಿದರನ್ನು ಕರೆಸಿದರು. ಅದರಲ್ಲಿ ಒಂದು ಪ್ರಕರಣ, ಕುಮಾರಿ ಜಯಲಲಿತ ಪ್ರಕರಣ; ಇದು ದೊಡ್ಡ ಪ್ರಕರಣವಾಗಿ ಪರಿಣಮಿಸಿದೆ. 2 ನೇ ತಾರೀಖು ಮೈಸೂರಿನಲ್ಲಿ ಕುಮಾರಿ ಜಯಲಲಿತ ಕಾರ್ಯಕ್ರಮ ನಡೆಯಬೇಕಾಗಿತ್ತು. ಅವರಿಗೆ 5500 ರೂಪಾಯಿ ಸಂಭಾವನೆಯನ್ನು ಫಿಕ್ಸ್ ಮಾಡಿ ಕಾರ್ಯಕ್ರಮಕ್ಕೆ ಬರಬೇಕು ಎಂದರು, ಅವರು ಒಪ್ಪಿದರು. ಆದರೆ ಇಲ್ಲಿಗೆ ಅವರು ಬರುವುದು ಯಾವುದೋ ಕಾರಣದಿಂದ, ನಿಂತು ಹೋಯಿತು. ಆ ಕಾರಣವನ್ನು ಉಂಟುಮಾಡಿದವರು ಯಾರು ಎನ್ನುವುದು ಗೊತ್ತಿಲ್ಲ. ನೀವು ಜಯಲಲಿತ ಮೈಸೂರಿಗೆ ಬಂದರೆ ಬಹಳ ತೊಂದರೆಯಾಗುತ್ತದೆ, ಎಂದು ಯಾರೋ ಅವರಿಗೆ ಲೆಟರ್ ಬರೆದರು. ಈ ತೊಂದರೆಗೆ ಹೆದರಿ, ಅವರು ನಾಳೆ ನನ್ನ ನರ್ತನಕ್ಕೆ ತೊಂದರೆಯಾಗಿ, ನನ್ನ ಶರೀರಕ್ಕೆ ತೊಂದರೆಯಾಗಬಹುದು ಎನ್ನುವ ಉದ್ದೇಶದಿಂದ ಅವರು ಮುಂಚಿತವಾಗಿಯೇ ಟೆಲಿಗ್ರಾಂ ಮೂಲಕ ಅಧ್ಯಕ್ಷರಿಗೆ ಹೇಳಿದ್ದಾರೆ. ಕಾಗದವನ್ನೂ ಬರೆದಿದ್ದಾರೆ. ಇಷ್ಟಾದಮೇಲೆ ಶಾಂತಿಯಾಯಿತು. 21ನೇ ತಾರೀಖು ಮೈಸೂರಿನ ಪ್ರೀಮಿಯರ್ ಸ್ಟುಡಿಯೋನಲ್ಲಿ ಅವರದ್ದು ಷೂಟಿಂಗ್ ಇತ್ತು. ಈ ಷೂಟಿಂಗಿನ ನಿರ್ಮಾಪಕರು ಯಾರು ಅಂದರೆ, ಶ್ರೀ ಬಿ. ಆರ್. ಪಂತಲುರವರು. ಸ್ಟುಡಿಯೋ ಮಾಲೀಕರಿಗೂ ಜಯಲಲಿತ ಅವರಿಗೂ ಯಾವ ಸಂಬಂಧವೂ ಇಲ್ಲ. ಪಂತುಲು ಅವರಿಗೂ ಸ್ಟುಡಿಯೋ ಮಾಲೀಕರಿಗೂ ಸಂಬಂಧವೂ ಇಲ್ಲ. ಇಷ್ಟು ಸೆಟ್ ಬಿಟ್ಟು ಕೊಡಬೇಕು, ಇಷ್ಟು ಬಾಡಿಗೆ ಕೊಡಬೇಕು, ಇಷ್ಟು ದಿವಸ ಎಂದು ಇರುತ್ತದೆ. ಜಯಲಲಿತ ಅವರನ್ನು ಕರೆದುಕೊಂಡು ಹೋಗ ತಕ್ಕ ರಕ್ಷಣೆ ಎಲ್ಲಾ ಸಂಪೂರ್ಣ ಹೊಣೆ ಪಂತಲು ಅವರದು. ಆದರೆ 20ನೇ ತಾರೀಖು ಟೆಲಿಗ್ರಾಂ ಬಂದ ತಕ್ಷಣ, ಅಧ್ಯಕ್ಷರಿಗೆ ಗೊತ್ತಾಯಿತು, ನಾಳೆ ಜಯಲಲಿತ ಸ್ಟುಡಿಯೋಗೆ ಬರುತ್ತಾರೆ ಎಂದು ಏನು ಹುಡುಗಾಟವೇ ನಾನು ಗವರ್ನಮೆಂಟಿನಲ್ಲಿ ಬಹಳ ಪ್ರಮುಖವಾದಂಥ ವ್ಯಕ್ತಿ, ಮಂತ್ರಿಗಳು ನನ್ನ ಕೈಯಲ್ಲಿ ಇದ್ದಾರೆ, ಪತ್ರಿಕಾಕರ್ತರು ನನ್ನ ಕೈಯಲ್ಲಿದ್ದಾರೆ, ಶಾಸನಸಭಾ ಸದಸ್ಯರು ನನ್ನ ಕೈಯಲ್ಲಿ ಇದ್ದಾರೆ, ಪೋಲೀಸಿನವರು ನನ್ನ ಕೈಯಲ್ಲಿದ್ದಾರೆ ಹೇಗೆ ಅವರು ಮೈಸೂರಿಗೆ ಬರುತ್ತಾರೆ ಎಂದು ತಕ್ಷಣ ಪ್ರೀಮಿಯರ್ ಸ್ಟುಡಿಯೋಗೆ ಫೋನ್ ಮಾಡಿದರು. ''ನಿಮ್ಮ ಸ್ಟುಡಿಯೋಗೆ ಜಯಲಲಿತ ಬರತಕ್ಕದ್ದು ನಿಜವೆ'' ಎಂದು ಕೇಳಿದ್ದಕ್ಕೆ ಸ್ಟುಡಿಯೋ ಮಾಲೀಕರಾದ ಬಸವರಾಜಯ್ಯನವರು ''ಹೌದು'' ಎಂದು ಹೇಳಿದರು. ಅದಕ್ಕೆ ಅಧ್ಯಕ್ಷರು ಅವರನ್ನು ಕಳುಹಿಸಿಕೊಡಿ, ನಮಗೆ ಈ ರೀತಿ ವೋರ್ನ ಮಾಡಿದ್ದಾರೆ, ಸರ್ಕಾರದವರು ಕರೆದಿರತಕ್ಕ ಫಂಕ್ಷನ್‌ಗೆ ಅವರು ಬರಲಿಲ್ಲ, ನೀವು ಅವರನ್ನು ಅಲ್ಲಿ ಸೇರಿಸಕೂಡದು ಎಂದು ಹೇಳಿದರು. ಬಸವರಾಜಯ್ಯನವರು ಅದು ನನ್ನ ಕೈಯಲ್ಲಿಲ್ಲ, ಅವರು ಬರತಕ್ಕದ್ದು ಅವರು ಹೋಗತಕ್ಕದ್ದು, ಯಾರು ಕಳುಹಿಸಬೇಕು, ಯಾರು ಅವರನ್ನು ಬಿಡಬೇಕು ಎನ್ನುವುದೂ ನನ್ನ ಕೈಯಲ್ಲಿಲ್ಲ, ನಾನು ಅವರ ನಿರ್ಮಾಪಕರಿಗೆ ಒಂದು ಸೆಟ್ಟನ್ನು ಬಾಡಿಗೆಗೆ ಕೊಟ್ಟಿದ್ದೇನೆಂದು ಹೇಳಿದರು. ಆ ಸೆಟ್ಟನ್ನು ಬಾಡಿಗೆ ಕೊಟ್ಟಾಗ ಸಂಪೂರ್ಣ ಅಧಿಕಾರ ನಿರ್ಮಾಪಕರಿಗೆ ಇದೆ; ಆದರೂ ನಾನು ಈ ವಿಷಯವನ್ನು ಅವರಿಗೆ ತಿಳಿಸುತ್ತೇನೆ ಎಂದು ಹೇಳಿದರು. ಅದಕ್ಕೆ ಅಧ್ಯಕ್ಷರು, ನೋ ನೋ, ನೀವು ತಿಳಿಸುವುದನ್ನು ತಿಳಿಸಿಬಿಡಿ ನಾಳೆ ಏನಾದರೂ ನಿಮ್ಮ ಸ್ಟುಡಿಯೋಗೆ ಜಯಲಲಿತ ಬಂದಿದ್ದೇ ಆದರೆ ಉಗ್ರವಾದ ಗಲಾಟೆಗಳನ್ನು ನೀವು ಎದುರಿಸಬೇಕಾಗುತ್ತದೆ, ಖಂಡಿತವಾಗಿಯೂ ಈ ವಿಷಯದಲ್ಲಿ ಅಡ್ಡಿ ಬರಕೂಡದು ಎಂದು ಹೇಳಿದರು. ಮುಖ್ಯಮಂತ್ರಿಗಳು ಕೂಡ ಈ ರೀತಿ ಮಾತನಾಡುವುದಿಲ್ಲ, ಹೊಣೆಗಾರಿಕೆ ಹೊತ್ತಿರತಕ್ಕ ಗೃಹ ಸಚಿವರು ಈ ರೀತಿ ಮಾತನಾಡುವುದಿಲ್ಲ. ನಮ್ಮ ವಿರೋಧ ಪಕ್ಷದ ನಾಯಕರೂ ಈ ರೀತಿ ಮಾತನಾಡುವುದಿಲ್ಲ. ಯಾವ ಯಾವ ಗುರುತರವಾದ ಸ್ಥಾನ, ಗೌರವ ಇಲ್ಲದಿರತಕ್ಕ ಅಧ್ಯಕ್ಷರು, ಈ ವಿಷಯದಲ್ಲಿ ಇಷ್ಟು ಹೆದರಿಕೆಯನ್ನು ತೋರಿಸಿ ಮಾತನಾಡಿದರು. ನಾಳೆ ಪೋಲೀಸರು ನಿಮಗೆ ಹೇಗೆ ಬೆಂಬಲ ಕೊಡುತ್ತಾರೆ ಎನ್ನುವ ಎಚ್ಚರಿಕೆಯ ಮಾತನ್ನು ಸ್ಟುಡಿಯೋ ಮಾಲೀಕರಿಗೆ ನೀಡಿದರು. ಬಹುಶಃ ಅವರು 9 ಗಂಟೆಗೆ ಫೋನ್ ಮಾಡಿದ್ದಾರೆ, 10 ಗಂಟೆಯ ಹೊತ್ತಿಗೆ ಪೋಲೀಸರು ಒಂದು ಜೀಪಿನಲ್ಲಿ, ಐದು ಜನ ಅಧಿಕಾರಿಗಳು ಎಲ್ಲರೂ ಒಟ್ಟಾಗಿ ಸ್ಟುಡಿಯೋಗೆ ಧಾವಿಸಿದರು. ಅದಾದ ಎರಡು ಗಂಟೆಯೊಳಗೆ, ಕಂಪ್ಲೇಂಟ್ ಕೊಟ್ಟಿರತಕ್ಕದ್ದು. ಕಂಪ್ಲೇಂಟ್ ತೆಗೆದುಕೊಂಡ ತಕ್ಷಣ, ಸ್ಟುಡಿಯೋನಲ್ಲಿ ಅಧಿಕಾರಿಗಳು ಬಂದು ಹೇಳುತ್ತಾರೆ, ಅವರ ಮೇಲೆ ಕಂಪ್ಲೇಂಟ್ ಇದೆ, ಈ ಆರ್ಟಿಸ್ಟ್ ಮೇಲೆ ಸೆಕ್ಷನ್ 420 ಕೇಸ್ ಇದೆ, ನಾವು ಅವರನ್ನು ಅರೆಸ್ಟ್ ಮಾಡುತ್ತೇವೆ ಎಂದು ಹೇಳಿದರು. ಈ ಅಧ್ಯಕ್ಷರು ಸತ್ಯಹರಿಶ್ಚಂದ್ರರು, ಪೋಲೀಸಿನವರಿಗೆ ಈ ರೀತಿ ಹೇಳಿಕಳುಹಿಸಿದ್ದಾರೆ. ಸ್ಟುಡಿಯೋದ ಮಾಲೀಕರು, ಅವರು ಲಕ್ಷಾಂತರ ರೂಪಾಯಿ ತೆರಿಗೆ ಕೊಡುತ್ತಿದ್ದಾರೆ, ಇನ್‌ಕಂಟ್ಯಾಕ್ಸ್ ಕೊಡುತ್ತಿದ್ದಾರೆ, ಅನೇಕ ಬಂಗಲೆಗಳು ಇವೆ, ದುಡ್ಡು ಇದೆ,

ನಿಮ್ಮ ದುಡ್ಡನ್ನು ತಿಂದುಕೊಂಡು ಹೋಗುವ ಉದ್ದೇಶವಿಲ್ಲ, ಬೇಕಾದರೆ ಸ್ಟುಡಿಯೋವನ್ನೆ ಜಾಮೀನು ಕೊಡುತ್ತೇನೆ ಅವನನ್ನು ಸ್ಟೇಷನ್‌ಗೆ ಕರೆದುಕೊಂಡು ಹೋಗಬೇಡಿ ಎಂದು ಹೇಳಿದರು. ಅನೇಕರು ಅನೇಕ ವಿಧವಾಗಿ ಹೇಳಿದ್ದು ಆಯಿತು, ಯಾರ ಮಾತನ್ನೂ ಲೆಕ್ಕಕ್ಕೆ ಇಡಲಿಲ್ಲ. ಬಹಳ ಒತ್ತಾಯದಿಂದ, ಕ್ಕೆಮುಗಿದು, ಯಾರೇ ಆಗಿರಲಿ, ಎಲ್ಲಿಂದಲೇ ಬಂದಿರಲಿ, ಬಣ್ಣ ಹಚ್ಚಿಕೊಂಡು ಬಂದಿರತಕ್ಕ ಹೆಣ್ಣುಮಗಳನ್ನು ಈ ರೀತಿ ಸ್ಟೇಷನ್‌ಗೆ ಕರೆದುಕೊಂಡು ಹೋಗಬಾರದು, ಏನೇ ಆದರೂ ಒಂದು ನಾವು ಜವಾಬ್ದಾರರು ಎಂದು ಸ್ಟುಡಿಯೋದಲ್ಲಿ ಇರತಕ್ಕವರೆಲ್ಲರೂ ಕೇಳಿಕೊಂಡರು. ಅವರು ಬಹುಶಃ ಪೋಲೀಸು ಅಧಿಕಾರಿಗಳಿಗೆ ಫೋನು ಮಾಡಿದರು, ಅವರ ಡೈರೆಕ್ಷನ್ ಅರ್ಸ್ ಮಾಡಿಕೊಂಡು ಬರಬೇಕು ಎಂಬುದು. ಬಹಳ ಒತ್ತಾಯಮಾಡಿದರು. ಇದು ಕಣ್ಣೀರಿನ ದೃಶ್ಯ. ಈ ದಿವಸ ಹೀಗೆ ಮಾಡಿ ನಮ್ಮ ಕರ್ನಾಟಕಕ್ಕೆ, ಕರ್ನಾಟಕದ ಸಂಸ್ಕೃತಿಗೆ ಅಪಮಾನಕರವಾದ ರೀತಿಯಲ್ಲಿ ನಡೆದುಕೊಂಡಿದ್ದಾರೆ. ಅಧ್ಯಕ್ಷರೇ ತಾವು ಮಹಿಳೆಯವರು, ತಮಗೂ ಇದನ್ನು ಕೇಳಿ ಕಣ್ಣೀರು ಬರಬಹುದು. ಸತ್ಯವಾದ ಕಥೆ ನಾನು ಹೇಳುವುದು.

4-00 P.M.

ಅಧ್ಯಕ್ಷರು:—ಇದನ್ನು ನೋಡಿ ಹೇಳುತ್ತಿದ್ದೀರಾ?

ಶ್ರೀ ವಾಟಾಳ್ ನಾಗರಾಜ್.—ಅಲ್ಲಿ ನಡೆದ ಸಂಪೂರ್ಣ ಕಥೆಯ ವಿವರ ತಮಗೆ ಕೊಡುತ್ತಿದ್ದೇನೆ. ಅಧ್ಯಕ್ಷರೇ, ನಿಮ್ಮ ಹೃದಯ ಎಂಥಹದು ಎಂಬುದು ನನಗೆ ಗೊತ್ತಿದೆ, ನೀವು ಇದರ ಕಥೆಯನ್ನು ಕೇಳಿದರೆ ಕಣ್ಣಲ್ಲಿ ನೀರು ಹಾಕುತ್ತೀರಿ. ತಮ್ಮನ್ನು ನಾನು ನೋಡಿದ್ದೇನೆ, ತಮ್ಮ ವಿಚಾರ ನನಗೆ ಗೊತ್ತಿದೆ. ಕಣ್ಣೀರು ಬರುವ ರೀತಿಯಲ್ಲಿ ನಡೆದ ವಿಚಾರವನ್ನು ಜನರು ಹೇಳಿದ್ದಾರೆ. ಅದನ್ನು ನಾನು ಹೇಳುವುದು. ಪೋಲೀಸು ಅಧಿಕಾರಿಗಳು ಎಷ್ಟು ಹೇಳಿದರೂ ಬಿಡಲಿಲ್ಲ. ಇದಕ್ಕೆ ಒಂದು ಕಾರಣವಿದೆ. ಅವರಿಗೂ ಪೋಲೀಸು ಅಧಿಕಾರಿಗಳಿಗೂ ಒಂದು ಲಿಂಕ್ ಇದೆ. ಮೈಸೂರು ಎಸ್. ಪಿ. ಬಹುಶಃ ವಿಶ್ವನಾಥ್ ಎಂದು ಕಾಣುತ್ತದೆ, ನನಗೆ ತಿಳಿದಿರುವ ಪ್ರಕಾರ ಅವರಿಗೆ ನಾಗಾಲ್ಯಾಂಡಿಗೆ ವರ್ಗವಾಗಿದೆ. ಇದಕ್ಕೆಲ್ಲಾ ಶ್ರೀ ಕೆ. ಕೆ. ಮೂರ್ತಿಗಳೇ ಜವಾಬ್ದಾರರು.

ಶ್ರೀ ಬಿ. ಪುಟ್ಟಸ್ವಾಮಯ್ಯ (ರಾಮನಗರಂ).—ತಾವು ಅಧ್ಯಕ್ಷ ಸ್ಥಾನವನ್ನಲಂಕರಿಸಿದ್ದೀರಿ. ಮೇಲೆ ಮಹಾತ್ಮ ಗಾಂಧಿಯವರಿದ್ದಾರೆ, ವಲ್ಲಭಾಯಿ ಪಟೇಲರಿದ್ದಾರೆ, ಬಾಬು ರಾಜೇಂದ್ರ ಪ್ರಸಾದರಿದ್ದಾರೆ, ರಾಧಾಕೃಷ್ಣನರವರಿದ್ದಾರೆ. ಮಾನ್ಯ ಕೆ. ಕೆ. ಮೂರ್ತಿಗಳು ಯಾರೋ ಗೊತ್ತಿಲ್ಲ. ನರಕಾರ ಅವರ ಒಂದು ಫೋಟೋ ಅಥವ ಶಿಲಾ ಮೂರ್ತಿಯನ್ನಿಡಬಹುದಾಗಿತ್ತು. ಅವರ ಮುಖವನ್ನು ಒಂದು ಸಲ ನಮಗೆ ತೋರಿಸಿಬಿಡಿ ತಾಯಿ. ನಾನು ಅವರನ್ನು ನೋಡಿಲ್ಲ. (ನಗು)

ಶ್ರೀ ವಾಟಾಳ್ ನಾಗರಾಜ್.—ಯಾರಾದರೂ ಬೇರೆಯವರು ಈ ರೀತಿ ಮಾಡಿದ್ದರೆ ಪೋಲೀಸಿನವರೆಷ್ಟು ತೊಂದರೆ ಕೊಡುತ್ತಿದ್ದರೋ ಪೋಲೀಸಿನವರಿಗೂ ಇದಕ್ಕೂ ಏನು ಸಂಬಂಧವಿಲ್ಲ ಎಂಬುದು ಅಧ್ಯಕ್ಷರಿಗೆ ಮನವರಿಕೆಯಾಗಬೇಕು. ಪೋಲೀಸಿನವರು ದಸ್ತಗಿರಿ ಮಾಡಲು ಸಂಪೂರ್ಣವಾಗಿ ಸಹಕಾರ ಮಾಡಿದ್ದಾರೆ. ಎಸ್. ಪಿ. ಡಿ. ಐ. ಜಿ. ಸರ್ಕಲ್ ಇನ್‌ಸ್ಪೆಕ್ಟರ್ ರಂಗದೊರೆ ಮುಂತಾದವರೆಲ್ಲಾ ಸೇರಿ ಅಧ್ಯಕ್ಷರಿಗೆ ಬೆಂಬಲ ಕೊಟ್ಟು ಒಬ್ಬ ಮಹಿಳೆಗೆ ಮಾನಾಪಹರಣ ಮಾಡಿರುವುದು ನೀತಿಗೆಟ್ಟ ಕೆಲಸ. ಶ್ರೀಮಾನ್ ಸಿದ್ದವೀರಪ್ಪನವರು ಗೃಹ ಸಚಿವರಾಗಿದ್ದರೆ ಈ ರೀತಿ ಮಾಡಲು ಅವಕಾಶ ಕೊಡುತ್ತಿದ್ದರೇ ಎಂದು ಕೇಳುತ್ತಿದ್ದೇನೆ.

ಶ್ರೀ ಎಚ್. ಸಿದ್ದವೀರಪ್ಪ —ಎಲ್ಲಾ ಬಿಟ್ಟು ನನ್ನ ಕಡೆ ಏಕೆ ತೋರಿಸುತ್ತಿದ್ದೀರಿ?

ಶ್ರೀ ವಾಟಾಳ್ ನಾಗರಾಜ್.—ತಾವು ಇದನ್ನು ಸಹಿಸುತ್ತಿರಲಿಲ್ಲ.

ಶ್ರೀ ಎಚ್. ಸಿದ್ದವೀರಪ್ಪ.—ಇದೆಲ್ಲಾ ಹೀಯರ್‌ಸೇ ಮೇಲೆ ಹೇಳುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್.—ಸ್ಟುಡಿಯೋದವರು ಪತ್ರ ಬರೆದಿದ್ದಾರೆ. ಈ ರಾಜ್ಯದಲ್ಲಿ ಪೋಲೀಸರು ಯಾರೋ ಒಬ್ಬ ಅಧ್ಯಕ್ಷರ ಮಾತಿಗೆ ಬೆರೆ ಕೊಟ್ಟು ಅದನ್ನು ಪರಿಶೀಲೆ ಮಾಡದೆ ಸತ್ಯಾಸತ್ಯತೆಯನ್ನು ನೋಡದೆ ಮುಂದುವರಿದಿದ್ದಾರೆ. ಮಹಿಳೆಯ ಕಡೆಯವರು ಬಂದು 5500 ರೂಪಾಯಿಗಳನ್ನು ಹಿಂದಿರುಗಿಸುತ್ತೇವೆ ತೆಗೆದುಕೊಳ್ಳಿ ಎಂದು ಹೇಳಿದರು. ಅವರು ಆಕೆಯ ಸಂಬಂಧಿ ಇದ್ದಾರೆ. ಅವರು ಅಧ್ಯಕ್ಷರಿಗೆ ಫೋನು ಮಾಡಿ ಹೇಳಿದ್ದಾರೆ.

Sri AZEEZ SAIT (Minister for Labour).—This is a Notice issued under Section 59 and the Hon'ble Member has to limit his speech within the scope of Section 59. If he is interested to know anything connected with the matter, then the Government is prepared to let him know. If he starts speaking as if he was an eye-witness of the incident, then, where is the need for my reply? It looks very horrible. The Hon'ble Member starts speaking as if he was there. He is just talking from hear and say; it is like the hill killing a rat. He is making small matters so big.

ಶ್ರೀವಾಟಾಳ್ ನಾಗರಾಜ್.—ಇಲ್ಲ. ಕೆ ಕೆ ಮೂರ್ತಿಯವರು ಉತ್ತರ ಕೊಟ್ಟು ಪೋಲೀಸರಿಗೂ ತಮಗೂ ಸಂಬಂಧವಿಲ್ಲವೆಂದು ತಿಳಿಸಿದರು.

Sri M. S. KRISHNAN.—This discussion is regarding the irregularities that occurred in regard to the cultural activities as a part of the Dasara Celebrations during this year's Dasara. Sri Vatal Nagaraj is well within his limits. He is speaking about her, because she is a cultural personality connected with the Dasara festivities. I do not know the reason why Mr. Vatal Nagaraj should not be allowed to talk about it.

Madam SPEAKER.—That is why we are allowing him to speak.

ಶ್ರೀ ವಾಟಾಳ್ ನಾಗರಾಜ್.—ಮೈಸೂರಿಗೆ ಬಂದಾಗ ಅವರಿಗೆ ಸಂಬಂಧಪಟ್ಟ ಸಮೀಪ ಬಂಧು ಕೆ. ಕೆ. ಮೂರ್ತಿ ಯವರಿಗೆ ಫೋನ್ ಮಾಡಿ 5500 ರೂಪಾಯಿಗಳನ್ನು ಹಿಂದಿರುಗಿಸುವುದಾಗಿ ಹೇಳಿದ್ದಾರೆ. ಪೋಲೀಸಿನವರಿಗೂ ನನಗೂ ಸಂಬಂಧವಿಲ್ಲ, ನನ್ನ ಕರ್ತವ್ಯ ನಾನು ಮಾಡಿದ್ದೇನೆ ಎಂಬುದಾಗಿ ಅಧ್ಯಕ್ಷರ ಹೇಳಿಕೆ ಇದೆ. ಅದು ಸರಿಯಲ್ಲ, ಅವರಿಗೆ ಸಂಬಂಧವಿದೆ. ಇದಕ್ಕೆ ನಿದರ್ಶನ ಕೊಡಲು ನನ್ನಬಳಿ ಇರುವ ಒಂದು ದೊಡ್ಡ ಚಿತ್ರವನ್ನು ಕಳುಹಿಸುತ್ತೇನೆ. ಮೂರ್ತಿಯವರಿಗೆ ಮೈಸೂರಿನ ದೊಡ್ಡ ದೊಡ್ಡ ಅಧಿಕಾರಿಗಳ ಸಂಬಂಧವಿದೆ. ಡಿ. ಐ. ಜಿ ಎನ್. ಜಿ. ಸಲ್ಕೆ ಅವರಿಗೆ ಗೊತ್ತಿದೆ. ಅವರು ಮೈಸೂರಿನವರು. ಕೆ. ಶ್ರೀಕಂಠಯ್ಯ ಎನ್ನುವವರು ಅಧ್ಯಕ್ಷರ ಸಹೋದರರು, ಹೇಮಮಾಲಿನಿಗೆ ಅವರ ಮನೆಯಲ್ಲಿ ಪಾರ್ಟಿ ಕೊಟ್ಟರು. ಫೋಟೋ ಇದೆ, ಸ್ಕ್ರಿಪ್ಟ್ ಪೇಪರು ನನ್ನ ಕೈಲಿದೆ. ಆದರೆ ಅಧ್ಯಕ್ಷರು ನನಗೆ ಏನೂ ಸಂಬಂಧವಿಲ್ಲವೆಂದು ಹೇಳಿಕೆ ಕೊಟ್ಟಿದ್ದಾರೆ. ಅವರು ತಾವು ಪೋಲೀಸರ ಮೇರೆ ಪ್ರಭಾವ ಬೀರಿಲ್ಲ ಎಂದು ಹೇಳಿದ್ದಾರೆ ಅದಕ್ಕೆ ನಾನು ಹೇಳುವುದು. ಶ್ರೀಕಂಠಯ್ಯನವರ ಮನೆಯಲ್ಲಿ ಒಂದು ಪಾರ್ಟಿಕೊಟ್ಟಿದ್ದಾರೆ. ಅಲ್ಲಿ ಎನ್ ಜಿ ಸಲ್ಕೆ ಡಿ ಐ ಜಿ, ಎಸ್ ಪಿ-ವಿಶ್ವನಾಥ್, ಕೆ ಕೆ ಮೂರ್ತಿ, ಮಿಸೆಸ್ ಮೂರ್ತಿ.

ಅಧ್ಯಕ್ಷರು.—ಅದು ಬೇರೆ ಸಂದರ್ಭದಲ್ಲಿ ತೆಗೆದ ಫೋಟೋ. ಅದಕ್ಕೂ ಇದಕ್ಕೂ ಏನು ಸಂಬಂಧ?

ಶ್ರೀ ವಾಟಾಳ್ ನಾಗರಾಜ್.—ಮೈಸೂರು ದಸರಾಕ್ಕೆ ಹೇಮಮಾಲಿನಿ ಬಂದಾಗ ಅವರೆಲ್ಲರೂ ಹೋಗಿದ್ದರು. ಡಿ. ಜೆ. ಬಾಲರಾಜ್ ಎನ್ನುವವರೂ ಇದ್ದಾರೆ. ಎಲ್ಲ ಅಧಿಕಾರಿಗಳು ಅವರ ಮನೆಗೆ ಹೋಗಿದ್ದಾರೆ. ಇದೇನು ಮಾಯೆ? ಪೋಲೀಸ್ ಇನ್‌ಸ್ಪೆಕ್ಟರು ಏಕೆ ಹೋಗಲಿಲ್ಲಾ? ಆ 22ನೇ ತಾರೀಖಿನ ದಿನ ಹತ್ತೂವರೆ ಗಂಟೆಯಲ್ಲಿ ಸ್ಟೂಡಿಯೋಕ್ಕೆ ಜಯಲಲಿತಾಳನ್ನು ಕರೆದು ಕೊಂಡು ಬರುತ್ತೇವೆ ಎಂಬ ಸುದ್ದಿಯನ್ನು ಕೇಳಿದ ಕೂಡಲೆ, ನಾವು ಏನು ಮಾಡಿದರು ಇವರು ಬಗ್ಗಲಿಲ್ಲವಲ್ಲಾ ಎಂದು ಹೇಳಿ, ಆ ದಿವಸ ಆ ಸ್ಟೂಡಿಯೋ ಹತ್ತಿರ ಪೋಲೀಸರೇ ನೂರು ಗೂಂಡಾಗಳನ್ನು ತಮ್ಮ ವ್ಯಾನಿನಲ್ಲೇ ಕರೆದುಕೊಂಡು ಹೋಗಿ, ಅವರ ಕಾಂಪೌಂಡಿನಲ್ಲಿ ನುಗ್ಗಿ ದಾಂಧಲೆ ಮಾಡುತ್ತಿದ್ದ ಕಾಲಕ್ಕೆ ಆ ಮಾಲೀಕರು ಪೋಲೀಸ್ ಸ್ಟೇಷನ್ನಿಗೆ ಅಂದರೆ ಆ ಸ್ಟೂಡಿಯೋಕ್ಕೆ ಅಕ್ಕ ಪಕ್ಕದಲ್ಲಿದ್ದ ಪೋಲೀಸ್ ಸ್ಟೇಷನ್ನುಗಳಿಗೆ ಫೋನ್ ಮಾಡಿ ತಿಳಿಸಿದರೂ ಅಲ್ಲಿಗೆ ಪೋಲೀಸಿನವರೂ ಯಾರೂ ಬರಲೇ ಇಲ್ಲ. ಅವರೇನಿದ್ದರೂ ಆ ಮಾಲೀಕರಿಗೆ ಪೋಲೀಸಿನವರು ಇನ್ನು ಐದು ನಿಮಿಷಗಳಲ್ಲೇ ಬರುತ್ತಾರೆ ಎಂದು ಹೇಳುತ್ತಿದ್ದರೇ ವಿನಾ ಪೋಲೀಸಿನವರು ಯಾರೂ ಅಲ್ಲಿಗೆ ಬರಲಿಲ್ಲ. ಹೀಗಾಗಿ ಆ ಸಮಯದಲ್ಲಿ ಅಲ್ಲಿದ್ದ ಕಲಾವಿದರಿಗೂ ಮತ್ತು ಅಲ್ಲಿದ್ದ ಜನರಿಗೂ ದೊಡ್ಡ ಗಲಾಟೆ ನಡೆಯಿತು. ಆ ವೇಳೆಯಲ್ಲಿ ಆ ಸ್ಟಾಟಿಗೆ ಬರುತ್ತಿದ್ದ ಪೋಲೀಸಿನವರು ಹೊರಗಡೆಯಲ್ಲೇ ತಾವು

ಬರುತ್ತಿದ್ದ ಜೀಪುಗಳಲ್ಲಿ ಅಲ್ಲೇ ಅಂದರೆ ಹೊರಗಡೆಯಲ್ಲೇ ಉಳಿದು ಇದನ್ನೆಲ್ಲಾ ನೋಡುತ್ತಿದ್ದರು. ಇದು ಎಂಥಾ ಅನ್ಯಾಯ ? ಇದಕ್ಕೆಲ್ಲಾ ನನ್ನಲ್ಲಿ ಸಾಕ್ಷಿ ಸಾಹಿತ್ಯವಿದೆ, ಒದಗಿಸುತ್ತೇನೆ. ನಾವು ಆ ಕೆ. ಕೆ. ಮೂರ್ತಿಯವರ ಬಗ್ಗೆ ಇವೇ ಸಭೆಯಲ್ಲಿ ಎಷ್ಟೋ ಪ್ರಕರಣಗಳನ್ನು ತಿಳಿಸಿದ್ದಾಗ್ಯೂ ನಾವು ಅಪಾದನೆ ಮಾಡಿದಷ್ಟೂ ನಮ್ಮ ಮುಖ್ಯ ಮಂತ್ರಿಗಳು ಅವರನ್ನು ಹೆಚ್ಚು ಹೆಚ್ಚು ಉನ್ನತ ಸ್ಥಾನಕ್ಕೇರಿಸಲು ಕಾರಣವೇನು ? ಇದು ವಿಚಿತ್ರವನ್ನು ವಿಚಾರಿಸ್ತಾ ಬಂದಿದೆ.....

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಸದಸ್ಯರಿಗೆ ವಿಷಯಗಳು ಸರಿಯಾಗಿ ಗೊತ್ತಿದೆಯೋ ಇಲ್ಲವೋ ತಿಳಿಯದು. ಆದರೆ ವಿಷಯವನ್ನು ಸರಿಯಾಗಿ ತಿಳಿದುಕೊಳ್ಳದೆ ಮಾತನಾಡತಕ್ಕದ್ದು ಮಾನ್ಯ ಸದಸ್ಯರ ಒಂದು ವೈಶಿಷ್ಟ್ಯತೆ. ಶ್ರೀಮತಿ ಮೂರ್ತಿ ಅವರು ಆ ಸಂಸ್ಥೆಯಲ್ಲಿ ಮ್ಯಾನೇಜಿಂಗ್ ಡೈರೆಕ್ಟರಾಗಿ ಆವದ್ದು ಯಾವಾಗ ? ನಾನು ಇಲ್ಲಿ ಈ ಸ್ಥಾನಕ್ಕೆ ಬರುವುದಕ್ಕೆ ಮುಂಚೆಯೇ, ಅಲ್ಲಿ ಅವರಾಗಲೇ ಡೈರೆಕ್ಟರಾಗಿದ್ದರು. ಅದು ಒಂದು ಷೇರ್ ಹೋಲ್ಡರ್ ಕಂಪೆನಿ. ಅದರಲ್ಲಿ ಯಾರೂ ಬೇಕಾದರೂ ಷೇರ್‌ಹೋಲ್ಡರುಗಳಾಗುವುದಕ್ಕೆ ಅವಕಾಶವಿದೆ. ಡೈರೆಕ್ಟರೂ ಆಗಬಹುದು. ಆದರೆ ನಾನು ಬಂದಮೇಲೆ ಇತ್ತೀಚೆಗೆ ಅವರು ಡೈರೆಕ್ಟರಾಗಿದ್ದಾರೆಂಬುದು ಸತ್ಯಕ್ಕೆ ದೂರವಾದ ಮಾತು. ಅದು ವಾಸ್ತವವಾದುದಲ್ಲ.

ಶ್ರೀ ವಾಟಾಳ್ ನಾಗರಾಜ್.—ಶ್ರೀ ಧರ್ಮವೀರ ಅವರು ಅವರನ್ನು ಅಪಾಯಿಂಟ್ ಮಾಡಿದರು. ಹಿಂದೆ ಇದ್ದ ಸರ್ಕಾರ ಯೋಗ್ಯವಾದುದಾಗಿರಲಿಲ್ಲ ಎಂದು ಈಗಿನ ಮುಖ್ಯ ಮಂತ್ರಿಗಳು ಈ ಸ್ಥಾನಕ್ಕೆ ಬಂದಿದ್ದಾರೆ. ಇವರ ಸರ್ಕಾರದಲ್ಲಿ ನಮಗೆ ಬಹಳ ನಂಬಿಕೆ ಇದೆ.

ಶ್ರೀ ಡಿ. ದೇವರಾಜ ಅರಸ್.—ನಿಮಗೂ ಅವರಿಗೂ ವೈಯಕ್ತಿಕವಾಗಿ ದ್ವೇಷವಿರಬಹುದು. ವಿರೋಧವಿರಬಹುದು. ಅದಕ್ಕೆ ನಾವೇನು ಮಾಡೋಣ ?

ಶ್ರೀ ವಾಟಾಳ್ ನಾಗರಾಜ್.—ನನಗೂ ಅವರಿಗೂ ಯಾವ ವೈಯಕ್ತಿಕ ದ್ವೇಷವೂ ಇಲ್ಲ. ಅವರೆ ಅವರು ಈಗಿನ ಮಂತ್ರಿಮಂಡಲದ ಹೆಸರನ್ನು ಕೆಡಿಸುತ್ತಾರೆ. ಆದ್ದರಿಂದ ನಾನು ನಮ್ಮ ಮುಖ್ಯ ಮಂತ್ರಿಗಳಿಗೆ ಕೈಮುಗಿದು ಬೇಡಿಕೊಳ್ಳುವುದೇನೆಂದರೆ ಅವರಿಂದ ಇಡೀ ಮಂತ್ರಿಮಂಡಲಕ್ಕೆ ಕೆಟ್ಟ ಹೆಸರು ಬರುತ್ತದೆ, ಅವರನ್ನು ಹತ್ತಿರ ಸೇರಿಸಬೇಡಿ. ಅವರು ಕೋಲ್ಕತ್ತಾ ಕೋಲ್ಕತ್ತ ಕೆಟಗೆರೆಯಲ್ಲಾ ಚೀಫ್ ಮಿನಿಸ್ಟರು ನನ್ನ ಕೈಲಿದ್ದಾರೆ, ನಿಮಗೆ ಏನು ಬೇಕಾದರೂ ಮಾಡಿಸಿ ಕೊಡುತ್ತೇನೆಂದು ಎಲ್ಲರಿಗೂ ಹೇಳುತ್ತಿದ್ದಾರೆ. ಅವರ ಇಂಥಾ ಹೇಳಿಕೆಯಿಂದಾಗಿ ಎಲ್ಲಾ ಅಧಿಕಾರಿಗಳೂ ವರ್ಗಾವರ್ಗಿಗಾಗಿ ಅವರ ಮನೆಗೆ ಅಲೆಯುತ್ತಿದ್ದಾರೆ. ಅವರು ಈ ರಾಜ್ಯದಲ್ಲಿ ಏನು ಮಾಡಿದರೂ ಅವರನ್ನು ದಂಡಿಸತಕ್ಕವರೇ ಇಲ್ಲ. ಅವರೇನು ಮಾಡಲಿ 'ಬಾರಾಖಾನ್—ಮಾಫ್' ಎನ್ನುವಂತಾಗಿದೆ. ಹಿಂದೆ ಇದ್ದ ಸರ್ಕಾರಕ್ಕಿಂತ ಇಂದು ಇರತಕ್ಕ ಸರ್ಕಾರದಿಂದ ರಾಜ್ಯಕ್ಕೆ ಒಂದು ಒಳ್ಳೆಯ ಆಡಳಿತ ಸಿಕ್ಕುತ್ತದೆಂದು ನಾವೆಲ್ಲರೂ ನಂಬಿಕೊಂಡಿದ್ದೆವು. ಆದರೆ ನಮಗೆ ಅದೇಕೋ ಇತ್ತೀಚೆಗೆ ಈ ಆಡಳಿತದಲ್ಲೂ ಹೆಚ್ಚಿನ ಸಂಶಯಗಳು ತಲೆದೋರುತ್ತಿವೆ. ಈಗಿರತಕ್ಕ ಸರ್ಕಾರದವರು ಆ ಕೆ. ಕೆ. ಮೂರ್ತಿಯವರನ್ನು ಯಾವ ಕಾರಣಕ್ಕಾಗಿ ಹೀಗೆ ಬೆಳೆಸಿಕೊಂಡು ಬರುತ್ತಿದ್ದಾರೆ! ಅವರು ಮಾಡಿರತಕ್ಕ ಅನೇಕ ಆರೋಪಣೆಗಳನ್ನು ಇದೇ ಸಭೆಯಲ್ಲಿ ಹೇಳಿದ್ದಾಯಿತು. ಏಕೆ ಅವರ ಬಗ್ಗೆ ವಿಚಾರಣೆ ನಡೆಸಲಿಲ್ಲಾ ? ಆ ದಿವಸ ಇವರ ಚಿತಾವಣೆಯಿಂದ ಆದ ಪ್ರಸಂಗದ ಬಗ್ಗೆ ಜಯಲಲಿತ ಪ್ರಧಾನಿಗೆ ದೂರಿತ್ತಾಗ ಕೆ. ಕೆ. ಮೂರ್ತಿ ಅವರು ಶ್ರೀ ಯಶಪಾಲ್ ಕಪೂರ್‌ರವರಿಗೆ ಫೋನ್ ಮಾಡಿದರು.....

Sri AZEEZ SAIT.—Hon'ble Member Sri Vatal Nagaraj is raising the names of members of Parliament and others who are not in the House.

Sri S. M. KRISHNA.—The Hon'ble Member is dragging the name of a Member of Parliament. It is not within the competence of this House to mention the name of a Parliament Member who is not here to defend himself.

ಅಧ್ಯಕ್ಷರು.—ಮಾನ್ಯ ಸದಸ್ಯರಿಗೆ ಸಭೆಯಲ್ಲಿ ಹಾಜರಿಲ್ಲದೆ ಇರತಕ್ಕವರ ಹೆಸರನ್ನು ಎತ್ತಬಾರದು ಎಂಬುದಾಗಿ ಹತ್ತಾರಾವರ್ತಿ ಹೇಳಿದ್ದಾಯಿತು. ಇನ್ನಾದರೂ ಮಾನ್ಯ ಸದಸ್ಯರು ದಯಮಾಡಿ ತಮ್ಮ ವಿಚಿತಿಯೊಳಗೆ ಮಾತನಾಡಬೇಕೆಂದು ಹೇಳುತ್ತೇನೆ.

Sri H. SIDDAVEERAPPA.—What the Hon'ble Ministers stated may be considered. The Hon'ble Speaker may be pleased to look into the records to see what is relevant and what is not relevant in the speech of the Hon'ble Member. I would make a special request to the Speaker to see that those portions which are not desirable, do not go into records, because names of persons including those of the highest dignitary have been dragged in. Let us be within bounds. Let the Hon'ble Member say but well within the bounds as laid down in the Rules.

Madam SPEAKER.—I shall look into the records.

ಶ್ರೀ ಪಾಟಾಳ್ ನಾಗರಾಜ್.—ನನಗೂ ಅವರಿಗೂ ಯಾವ ವಿಧವಾದ ವೈಯಕ್ತಿಕ ದ್ವೇಷವೂ ಇರುವುದಿಲ್ಲ. ಇದೇ ಸಭೆಯಲ್ಲಿ ಅವರ ಬಗ್ಗೆ ಎಷ್ಟೊ ಪ್ರಕರಣಗಳು ನಡೆದವು. ಆದಾಗ್ಯೂ ಈ ಸರ್ಕಾರ ಕಣ್ಣುಮುಚ್ಚಿ ಕುಳಿತಿದೆ. ನಾವು ಹೇಳಿದ್ದರಲ್ಲಿ ಯಾರು ನ್ಯಾಯ, ಯಾರದು ಅನ್ಯಾಯ ಎನ್ನುವುದನ್ನು ಕಂಡು ಹಿಡಿಯುವುದಕ್ಕೆ ತನಿಖೆ ನಡೆಸಬೇಡವೇ? ಹೊರಗಡೆಯಿಂದ ಬಂದ ಆ ಕರಾಪಾದರಿಗೆ ಅವರು ಇಲ್ಲಿ ಇಷ್ಟು ಕೊಂದರ ಕೊಟ್ಟರೂ ಅದನ್ನು ವಿಚಾರಣೆ ಮಾಡುವುದು ಬೇಡವೆ? ಹೀಗೆ ನಾವು ಇವರ ಬಗ್ಗೆ ದೂರುಗಳನ್ನು ಆಪಾದನೆಗಳನ್ನು ಹೇಳುತ್ತಾ ಹೋದ ಹಾಗೆಲ್ಲಾ ಸರ್ಕಾರದವರು ಇವನ್ನೇ ಪ್ರತಿಯೊಂದು ಸಮಿತಿಗೂ ನಪುಸ್ಯರನ್ನಾಗಿ ಅಧ್ಯಕ್ಷರನ್ನಾಗಿ ಮಾಡುತ್ತಾ ಹೋದರೆ ಅದಕ್ಕೆ ನಾವೇನು ಹೇಳಬೇಕು? ಇದು ನಿಷ್ಪಕ್ಷಪಾತ ನ್ಯಾಯವಾದದ್ದಲ್ಲ. ಇವರ ಬಗ್ಗೆ ಇಷ್ಟೊಂದು ಆಪಾದನೆಗಳನ್ನು ಮಾಡುತ್ತಿದ್ದಾಗ್ಯೂ ಇವನ್ನು ಷೀಲ್ಡ್ ಮಾಡುತ್ತಿರುವುದರ ಉದ್ದೇಶವಾದರೂ ಏನು? ಈ ವ್ಯಕ್ತಿ ನಡೆಸುತ್ತಿರುವ ಕೃತ್ಯಗಳನ್ನು ನೋಡಿದರೆ ಇವರಿಗೆ ಖಂಡಿತಾ ಯಾರಿಂದಲೂ ರಕ್ಷಣೆ ಸಿಕ್ಕುವಂತಿಲ್ಲ. ಇವರ ಬಗ್ಗೆ ಕ್ಯೇಂದ್ರ ಸರ್ಕಾರದ ಸ್ಪೆಶಲ್ ಏಜೆನ್ಸಿಯವರಾಗಲೀ ತನಿಖೆ ನಡೆಸಿದ್ದಾರೆ. ಆದರೆ ಈ ರಾಜ್ಯದಲ್ಲಿ ಇವರ ಮುಂದಿನ ಭವಿಷ್ಯವೇನು ಎನ್ನುವುದರ ಬಗ್ಗೆ ಒಂದು ಸಂಪೂರ್ಣ ಚಿತ್ರವನ್ನು ಈ ಸಭೆಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಸರ್ಕಾರದವರು ನಮ್ಮ ಮಾತಿಗೆ ಮನಃ ಕೊಡದಿದ್ದರೆ ನಾವು ಖಂಡಿತ ಬೇರೆ ಮಾರ್ಗವನ್ನು ಅನುಸರಿಸಬೇಕಾಗುತ್ತದೆ. ಈ ಸರ್ಕಾರದಲ್ಲಿ ಸತ್ಯಕ್ಕೆ ಬೆಲೆ ಇದ್ದರೆ ಈಗಲಾದರೂ ಇವರನ್ನು ಎಲ್ಲಾ ಸ್ಥಾನಗಳಿಂದಲೂ ಕೂಡಲೆಕಿತ್ತು ಹಾಕಬೇಕೆಂದು ಅಧ್ಯಕ್ಷರ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

†ಎಚ್ ಡಿ. ದೇವೇಗೌಡ (ಹೊಳೇನರಸೀಪುರ).—ಮಾನ್ಯ ಸಭಾಧ್ಯಕ್ಷಣಿಯವರೇ, ಈಗ ಎನ್ ಈ ಸಭೆಯ ಮುಂದೆ ಇಟ್ಟಿರತಕ್ಕ ನಿಲುವಳಿ ಸೂಚನೆ ಇದೆಯೋ ಅದರ ಬಗ್ಗೆ ನನಗೆ ಒಂದು ಕ್ಲಾರಿಫಿಕೇಷನ್ ಆಗಬೇಕು. ನಾನು ಯಾರ ಹೆಸರನ್ನೂ ಅಪ್ರಕೃತವಾಗಿ ಬಳಸಬೇಕೆಂಬ ಆಶೆ ನನಗೆ ಇಲ್ಲ. ರೂಲ್ 59ರ ಪ್ರಕಾರ ನಾವು ತಮಗೆ ಒಂದು ಮೋಷನ್ ಕೊಟ್ಟಿದ್ದೇವೆ. ಆದ್ದರಿಂದ ನಾನು ಯಾವ ಹೆಸರನ್ನಾದರೂ ಇಲ್ಲಿ ಬಳಸುವ ಬಗ್ಗೆ ಸರಿಯೋ ಅಥವಾ ತಪ್ಪೋ ಎಂಬ ಬಗ್ಗೆ ತಾವು ಒಂದು ರೂಲಿಂಗ್ ಕೊಟ್ಟರೆ ಬಹಳ ಒಳ್ಳೆಯದು. ಸಬ್ಜಕ್ಟ್ ಮ್ಯಾಟರ್ ಇರತಕ್ಕಂಥಾದ್ದು ಅವರ ಒಂದು ನಾಯಕತ್ವದಲ್ಲಿ ಹೋಗಿ ಒಂದು ವಿಷಯ ನಡೆದಿರತಕ್ಕದರ ಮೇಲೆ ನಾವು ಸೂಚನೆ ಕೊಟ್ಟಿರುವುದು. ಆದ್ದರಿಂದ ಅಂತಹ ವಿಷಯವನ್ನು ಈ ಸಭೆಯಲ್ಲಿ ಪ್ರಸ್ತಾಪ ಮಾಡುವಾಗ, ಅವರ ಒಂದು ಹೆಸರನ್ನು ಈ ಸಭೆಯಲ್ಲಿ ಬಳಸಬಾರದೆಂದು ಹೇಳುವುದಾದರೆ ಬಹಳ ಕಷ್ಟವಾಗುತ್ತದೆ. ತಮ್ಮ ಗಮನಕ್ಕೆ ಒಂದು ವಿಷಯವನ್ನು ತರುತ್ತಿದ್ದೇನೆ. ಹೆಚ್ಚಿಗೆ ಅವರ ಹೆಸರಿನ ಮೇಲೆ ಅವರನ್ನು ಟೀಸುವ ಅವಶ್ಯಕತೆ ಏನೂ ಇಲ್ಲ. ಅವರ ಕರ್ತವ್ಯದೋಷವನ್ನು ಕುರಿತು ನಾನು ಈ ಸಂದರ್ಭದಲ್ಲಿ ಕೆಲವು ಮಾತುಗಳನ್ನು ಹೇಳಬೇಕಾಗಿದೆ. ಈ ಒಂದು ಘಟನೆಯ ಬಗ್ಗೆ ಇಲ್ಲಿ ಚರ್ಚೆ ಮಾಡಬೇಕೆಂದಾಗ್ಗೆ ನನಗೆ ಅಷ್ಟೊಂದು ಸಂತೋಷವಿಲ್ಲ. ಕಾರಣವಾದರೂ ಇಷ್ಟೆ. ಈ ರಾಜ್ಯದಲ್ಲಿ ಈ ದೇಶದ ಮೂರನೆಯ ಒಂದು ಭಾಗ ಜನತೆ ತಮ್ಮ ಹೊಟ್ಟೆಯ ಕೂಲಿಗಾಗಿ ಪ್ರಲಾಪ ಪಡುತ್ತಿದ್ದಂಥ ಕಾಲದಲ್ಲಿ ದಸರಾ ಕಾರ್ಯಕ್ರಮವನ್ನು ರದ್ದುಮಾಡಬೇಕೆಂದು ಹೇಳಿ ಮನವಿಗಳು ಸಾಕಷ್ಟು ಬಂದಂಥ ಸನ್ನಿವೇಶದಲ್ಲಿ ಸರ್ಕಾರ ಒಂದು ನಿರ್ಣಯವನ್ನು ತೆಗೆದುಕೊಂಡಿತು. ನಾವು ಈ ಸಾರಿ ಕೆಲವು ಕಾರ್ಯಕ್ರಮಗಳನ್ನು ರದ್ದುಮಾಡುತ್ತೇವೆಂದು ಆ ವಿಚಾರವನ್ನು ನಾವೆಲ್ಲರೂ ಪತ್ರಿಕೆಗಳಲ್ಲಿ ಓದಿದ್ದೇವೆ. ಆದರೆ ಇಂತಹ ಒಂದು ಸಂಕಷ್ಟ ಪರಿಸ್ಥಿತಿಯಲ್ಲಿದ್ದಂಥ ಸನ್ನಿವೇಶದಲ್ಲಿ ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸರ್ಕಾರದವರು ಕೈಬಿಡಬೇಕಾಗಿತ್ತು. ಆ ರೀತಿ ಮಾಡದೆ ಈ ಕಾರ್ಯಕ್ರಮಗಳಿಗೆ 2 ಲಕ್ಷ 50 ಸಾವಿರ ರೂಪಾಯಿಗಳನ್ನು ಮೆಚ್ಚಮಾಡುವುದಕ್ಕೆ

ಸರ್ಕಾರ ಪ್ರಯತ್ನ ಮಾಡಿದೆ. ಇದರ ಅವಶ್ಯಕತೆಯಾದರೂ ಇದ್ದಿಲ್ಲವೆಂದು ನನ್ನ ಭಾವನೆ. ಕಾರಣಗಳನ್ನು ಆಮೇಲೆ ಹೇಳುತ್ತೇನೆ. ಈ ಸಾರಿಯ ವೈಶಿಷ್ಟ್ಯವೇನೆಂದರೆ, ದಸರಾ ಎಗ್ಸಿಬಿಷನ್ ಕಮಿಟಿಯ ಚೇರ್‌ಮನ್ನರೆ ಬೇರೆಯವರು ಆಗಿದ್ದಾರೆ. ಸಾಮಾನ್ಯವಾಗಿ ಆವರೇ ಈ ಕಲ್ಚರಲ್ ಸಬ್‌ಕಮಿಟಿಯ ಅಧ್ಯಕ್ಷರಾಗಿ ಈ ಕಾರ್ಯವನ್ನು ನಿರ್ವಹಣೆ ಮಾಡುತ್ತಿದ್ದರು. ಆದರೆ ಕಳೆದ ಸಾರಿ ಹಿಂದಿನ ರಾಜ್ಯಪಾಲರ ಆಳ್ವಿಕೆಯ ಕಾಲದಲ್ಲಿ ದಸರಾ ಎಗ್ಸಿಬಿಷನ್ ಕಮಿಟಿಯ ಚೇರ್‌ಮನ್ನರು ಈ ಒಂದು ಕಲ್ಚರಲ್ ಸಬ್‌ಕಮಿಟಿಯ ಚೇರ್‌ಮನ್ನರಾಗಿ ಬೇರೊಬ್ಬರನ್ನು ಮಾಡುವ ಒಂದು ಹೊಸ ಸಂಪ್ರದಾಯವನ್ನು ಹಾಕಿದರು. ಅದೇ ರೀತಿಯಲ್ಲಿ ಈ ವರ್ಷವೂ ನಮ್ಮ ಸರ್ಕಾರ ಮುಂದುವರಿಸಿಕೊಂಡು ಬಂದಿದೆ. ಈ ಸಾರಿ ನಮ್ಮ ಸ್ನೇಹಿತರಾದ ಶ್ರೀವಾನ್ ಕೆ. ಕೆ. ಮೂರ್ತಿಯವರನ್ನು ಚೇರ್‌ಮನ್ನರಾಗಿ ಮಾಡಿದರು. ಆದರೆ ಈವರ್ಷದ ಕಾರ್ಯಕಲಾಪಗಳ ಹಗರಣ ಹೆಲ್ಲಿಯವರೆಗೂ ಹೋಗಬೇಕಾಗಿ ಬಂತು. ಪ್ರಧಾನಮಂತ್ರಿಯವರೆಗೂ ದೂರು ಹೋಯಿತು. ರಾಜ್ಯದ ಕಲಾವಿದರ ಮನಸ್ಸಿನ ಮೇಲೆ ಸಾಕಷ್ಟು ಅವಮಾನಕರವಾದ ಪರಿಸ್ಥಿತಿಯನ್ನುಂಟುಮಾಡಿತು. ಅಸಂತೋಷವನ್ನೂ ಸಹ ಉಂಟುಮಾಡಿತು. ಈ ಒಂದು ಕಾರ್ಯಾಚರಣೆಯಲ್ಲಿ ಅವರು ಈ ಸಬ್ ಕಮಿಟಿಯ ಅಧ್ಯಕ್ಷರಾಗಿ ನಡೆದುಕೊಂಡ ರೀತಿಯಿಂದ ರಾಜ್ಯದಲ್ಲಿ ನಮ್ಮ ಕಲಾವಿದರ ಗೌರವ ಹಾಳಾಗಿ ಹೋಯಿತು. ಸರ್ಕಾರದ ಪ್ರತಿಷ್ಠೆಗೆ ಭಂಗ ಬಂತೆಂಬುದಾಗಿ ಹೇಳಿದರೆ ತಪ್ಪಾಗುವುದಿಲ್ಲ. ನಾನು ಇದರ ಬಗ್ಗೆ ಕೆಲವು ವಿವರಣೆಗಳನ್ನು ಕೊಡತಕ್ಕ ಕಾರಣದಲ್ಲಿ ದಿನಾಂಕ 7-10-72ರಲ್ಲಿ ಪತ್ರಿಕೆಗಳಲ್ಲಿ ಮೈಸೂರಿನ ಕಲಾವಿದರ ಬಗ್ಗೆ ಹೆಚ್ಚಿನ ಉತ್ತೇಜನ ಕೊಡಬೇಕೆಂದೂ ಅವರಿಗೆ ಕನಿಷ್ಠ ಪಕ್ಷ ಸೇಕಡ 50ರಷ್ಟಾದರೂ ಕಾರ್ಯಕ್ರಮಗಳನ್ನು ಒದಗಿಸಿಕೊಡಬೇಕೆಂದೂ ಒಂದು ಮನವಿ ಮಾಡಿತ್ತು. ಆ ಪ್ರಕಾರ ಪತ್ರಿಕೆಗಳಲ್ಲಿ ಜಾಹಿರಾತು ಆಗಿದೆ. ಮಾನ್ಯ ಶ್ರೀ ಮೂರ್ತಿಯವರನ್ನು 5-9-72ರಂದು ಕೆಲವು ಮೈಸೂರಿನ ಕಲಾವಿದರು ಭೇಟಿ ಮಾಡಿ ನಮಗೆ ಹೆಚ್ಚಿನ ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ಕೇಳಿದಾಗ, ಮಾನ್ಯ ಶ್ರೀ ಮೂರ್ತಿಯವರು ಕಲಾವಿದರು ಇಷ್ಟು ಜನರು ಇಲ್ಲಗೆ ಬಂದು ಭಿಕ್ಷೆ ಬೇಡಬಾರದು, ನೀವು ಹೋಗಿ, ಈ ರೀತಿಯಾಗಿ ಭಿಕ್ಷೆ ಬೇಡುವುದು ನಿಮಗೆ ಉಚಿತವಲ್ಲ, ಕಲಾವಿದರಿಗೆ ಇದು ಗೌರವ ತರತಕ್ಕ ಒಂದು ಮಾರ್ಗವಲ್ಲ, ಈ ರೀತಿ ಪ್ರತಿಷ್ಠೆಜ್ ಮಾಡಬಾರದು ಎಂಬುದಾಗಿ ಉಪದೇಶಮಾಡಿ ಅವರನ್ನು ಕಳುಹಿಸಿದ್ದಾರೆ. ಅದು ಪತ್ರಿಕೆಯಲ್ಲಿಯೂ ಬಂದಿದೆ. ನಾನು ಈ ಸಭೆಗೆ ಒಂದು ಮಾತನ್ನು ತಿಳಿಸಬಯಸುತ್ತೇನೆ. ಕಲಾವಿದರ ಜೀವನ ನಿಜವಾಗಿಯೂ ಬಹಳ ಕಷ್ಟದಲ್ಲದೆ. ನಮ್ಮ ರಾಜ್ಯದಲ್ಲಿಂತಕ್ಕ ಏನು ಮೇಲ್ದರ್ಜೆಯ ಕಲಾವಿದರಾಗಿದ್ದರೋ ಅವರಿಗೆ ಸಾರ್ವಜನಿಕರಿಂದ ಸಾಕಷ್ಟು ಉತ್ತೇಜನ ಸಿಗದೇ ಇದ್ದರೆ, ಅವರ ಸ್ಥಿತಿ ಇನ್ನೂ ಹದಗೆಡುತ್ತದೆ. ಅನೇಕ ಕಲಾವಿದರಿಗೆ ನಿಜವಾಗಿಯೂ ಕಷ್ಟವಿದೆ. ನಾನು ಅದನ್ನು ಒಪ್ಪಿಕೊಳ್ಳುತ್ತೇನೆ. ಆದರೆ ರಾಜ್ಯದಲ್ಲಿ ನಡೆಸತಕ್ಕ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ನಮಗೂ ವಿೂರಲಾಗಿ ಕೆಲವಾರು ಕಾರ್ಯಕ್ರಮಗಳನ್ನು ಇಟ್ಟಿರುತ್ತಾರೆಂಬ ದೃಷ್ಟಿಯಿಂದ ಕರ್ಚರಲ್ ಸಬ್ ಕಮಿಟಿ ಚೇರ್‌ಮನ್ನರನ್ನು ಭೇಟಿ ಮಾಡಿ ತಮ್ಮ ಮನವಿಯನ್ನು ಆರ್ಪಿಸಿ ಕೇಳಿಕೊಂಡಾಗ, ಈ ರೀತಿಯಾಗಿ ಅಂಗಲಾಚಿ ನನ್ನನ್ನು ಕೇಳಿಕೊಳ್ಳುವುದು ಸರಿಯೆಲ್ಲವೆಂಬ ಉಪದೇಶವನ್ನು ಅವರು ಕೊಟ್ಟಿದ್ದಾರೆ. ನಿಜ ಹೊಟ್ಟೆ ಬಟ್ಟೆಗೆ ಏನೋ ಒಂದು ಕಾರ್ಯಕ್ರಮ ಸಿಕ್ಕಿದರೆ ತಮ್ಮ ಬಂದು ದಿನದ ಕಷ್ಟವಾದರೂ ನಿವಾರಣೆಯಾಗಬಹುದೆಂಬ ದೃಷ್ಟಿಯಿಂದ ಮಾತ್ರ ಅವರು ಹೋಗಿದ್ದರು. ಅನೇಕ ಕಲಾವಿದರು ಬಹಳ ಬಡವರಾಗಿದ್ದಾರೆ. ಇಂತಹ ಕಲಾವಿದರ ಬಗ್ಗೆ ಮೇಲ್ಮಟ್ಟದ ಜೀವನವನ್ನು ನಡೆಸುವವರಿಗೆ, ಒಂದು ಭವ್ಯ ಜೀವನವನ್ನು ನಡೆಸುವವರಿಗೆ ಅವರ ಕಷ್ಟವೇನೆಂಬುದು ಹೇಗೆಗೊತ್ತಾಗುತ್ತದೆ? ಇಷ್ಟು ಉಪದೇಶಗಳನ್ನು ಮಾಡಿದ ಮೇಲೆ ಮೈಸೂರಿನ ಕಲಾವಿದರಿಗೆ ನಿಮ್ಮ ಅಧ್ಯಕ್ಷರಿಂದ 14-9-72ರವರೆಗೆ ಯಾವುದೇ ರೀತಿಯ ಉತ್ತರ ಬರಲಿಲ್ಲ. ಅದಾದ ಮೇಲೆ 26-9-72ರಲ್ಲಿ ಮಾನ್ಯ ಮುಖ್ಯಮಂತ್ರಿಗಳು ಆಗ ಡೆಲ್ಲಿಯಲ್ಲಿದ್ದರೆಂದು ಕೇಳಿದ ಮೇಲೆ ಅವರಿಗೆ ಒಂದು ಪತ್ರವನ್ನು ಕಲಾವಿದರು ಬರೆದಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಬಹುಶಃ ಮಾನ್ಯ ಮುಖ್ಯಮಂತ್ರಿಗಳು ಆ ಕಮಿಟಿಯ ಅಧ್ಯಕ್ಷರಿಗೆ ಹೇಳಿರಬಹುದು. ಮೈಸೂರಿನ ಕಲಾವಿದರಿಗೆ ಹೆಚ್ಚಿಗೆ ಅವಕಾಶ ಮಾಡಿಕೊಡಿ ಎಂಬುದಾಗಿ ಅವರು ತಿಳಿಸಿರಬಹುದೆಂದು ನನ್ನ ಅಭಿಪ್ರಾಯ. ಒಂದುವೇಳೆ ಅವರು ಆ ರೀತಿ ಹೇಳಿಲ್ಲವೆಂದು ಹೇಳಿದ್ದರೆ, ಅವರು ಈಗ ಈ ಸಭೆಯಲ್ಲಿ ಹಾಜರಿರುವುದರಿಂದ, ಆ ವಿಷಯವನ್ನು ಅವರೇ ಈ ಸಭೆಗೆ ಈಗ ತಿಳಿಸಬಹುದು. ಅದಾದ ಮೇಲೆ 7-10-72ರ ಪತ್ರಿಕೆಗಳಲ್ಲಿ ಕೆಲವು ಕಲಾವಿದರ ಕಾರ್ಯಕ್ರಮಗಳ ಒಂದು ಜಾಹಿರಾತು ಪ್ರಕಟಣೆ ಮಾಡಿತ್ತು. ದಸರಾ ಆಚರಣೆಯ ಅಂಗವಾಗಿ ಮೈಸೂರಿನಲ್ಲಿ ದಸರಾ ಸಾಂಸ್ಕೃತಿಕ ಹಾಗೂ ವೈಭವ ಕಾರ್ಯಕ್ರಮಗಳು ಎಂಬುದಾಗಿ ಕೆಡ್ಡಿಂಗ್ ಕೊಟ್ಟು 8ನೇ ತಾರೀಖಿನಿಂದ 20ನೇ ತಾರೀಖಿನವರೆಗೆ ಎಲ್ಲಾ ಕಾರ್ಯಕ್ರಮಗಳು ಪ್ರಕಟವಾಗಿದ್ದವು. ಆ ಕಾರ್ಯಕ್ರಮಗಳಲ್ಲಿ ಅರ್ಧಭಾಗ ಮೈಸೂರಿನ ಕಲಾವಿದರಿಗೇ ಕೊಟ್ಟಿದ್ದರು. ಅದಕ್ಕೋಸ್ಕರವೇ ಮಾನ್ಯ ಮುಖ್ಯ ಮಂತ್ರಿಗಳು ಆ ರೀತಿಯಾಗಿ ಸೂಚನೆಯನ್ನು

(ಶ್ರೀ ಎಚ್. ಡಿ. ದೇವೇಗೌಡ)

ಮೊದಲೇ ಕೊಟ್ಟಿರಬಹುದೆಂದು ನನ್ನ ಭಾವನೆ. ಈ ಒಂದು ಜಾಹಿರಾತು ಪತ್ರಿಕೆಗಳಲ್ಲಿ ಬರುವುದಕ್ಕೆ ಹಿಂದಿನ ದಿವಸ ಯಾವ್ಯಾವ ಕಲಾವಿದರುಗಳು ಅತ್ಯಪ್ತರಾಗಿದ್ದರೋ ಅವರೆಲ್ಲರೂ ಸೇರಿ ಒಂದು ಪ್ರತಿಭಟನೆ ಮಾಡುವುದಕ್ಕೆ ಒಂದು ಸಭೆಯನ್ನು ಬೆಂಗಳೂರಿನಲ್ಲಿ ಇಟ್ಟುಕೊಂಡಿದ್ದರು. ಹಿರಿಯ ಕಲಾವಿದರಾಗಿರತಕ್ಕ ಶ್ರೀಮಾನ್ ಆರ್. ನಾಗೇಂದ್ರರಾಯರನ್ನು ಕರೆಸಿ ಅವರಿಂದ ಒಂದು ಹೇಳಿಕೆಗೆ ರುಜುವಾಡಿಸಿಕೊಂಡು ಈಗ ಕೊಟ್ಟಿರುವ ಕಾರ್ಯಕ್ರಮಗಳ ಬಗ್ಗೆ ಅಸಮ್ಮತಿಯನ್ನು ಸೂಚಿಸಿ ಅಲ್ಲಿ ಏನು ಒಂದು ಸಮಿತಿ ಇದೆಯೋ ಅದು ತನ್ನ ಕಾರ್ಯನಿರ್ವಹಣೆಯನ್ನು ಸಮರ್ಪಕವಾಗಿ ಮಾಡುತ್ತಾ ಇಲ್ಲ, ಕಾರ್ಯಕ್ರಮಗಳನ್ನು ಏರ್ಪಡಿಸುವ ರೀತಿ ನೀತಿ ಅಷ್ಟು ಸಮಂಜಸವಾಗಿಲ್ಲ ಎಂದು ಹಾಗೂ ಅವರಿಂದ ಒಂದು ಹೇಳಿಕೆಯನ್ನು ಪತ್ರಿಕೆಯಲ್ಲಿ ಬರಮಾಡೆ ಮಾಡಿದ್ದಾರೆ. ಬೆಂಗಳೂರು ನಗರದಲ್ಲಿ ಈ ರೀತಿ ಅತ್ಯಪ್ತರಾದ ಕಲಾವಿದರ ಸಭೆ ಏನು ಏರ್ಪಾಡು ಆಗಿತ್ತು, ಯಾವ್ಯಾವ ಕಲಾವಿದರು ಆ ಒಂದು ಸಭೆಯಲ್ಲಿ ಭಾಗವಹಿಸಿದ್ದರೋ ಅವರಲ್ಲಿ ಕೆಲವರ ಹೆಸರುಗಳು ಅಂದು ಪ್ರಕಟವಾದಂಥ ಕಾರ್ಯಕ್ರಮದ ಪಟ್ಟಿಯಲ್ಲಿ ಸೇರಿದ್ದವು. ಆದರೆ ಆ ಕಲಾವಿದರಿಗೆ ಎಲ್ಲಿಂದಲೂ ಯಾವುದೇ ಒಪ್ಪಿಗೆ ಪತ್ರ ಬರಲಿಲ್ಲ. ಸಂಬಂಧಪಟ್ಟವರು ಅವರಿಗೆ ಈ ಕಾರ್ಯಕ್ರಮಗಳನ್ನು ತಿಳಿಸಿಲ್ಲವೆಂದು ಹೇಳಿದ್ದಾರೆ. ಆದರೆ ಪತ್ರಿಕೆಗಳಲ್ಲಿ ಕಾರ್ಯಕ್ರಮದಲ್ಲಿ ಅವರ ಹೆಸರುಗಳು ಸೇರಿರುವುದು ಜಾಹಿರಾತು ಆಗಿದೆ. ಅಲ್ಲಿ ಅವರು ಆ ರೀತಿ ನಮ್ಮ ಹೆಸರುಗಳನ್ನು ವ್ಯಕ್ತಪಡಿಸಿರುವ ಅಂಶ ಹಾಗೂ ನಮಗೆ ಪತ್ರ ವ್ಯವಹಾರ ನಮ್ಮ ಕಾರ್ಯಕಲಾಪಗಳ ಬಗ್ಗೆ ನಡೆಸಿರುವುದು ಯಾವುದೂ ಗೊತ್ತಾಗಲಿಲ್ಲವೆಂದು ತಮ್ಮ ಒಂದು ಅತೃಪ್ತಿಯನ್ನು ವ್ಯಕ್ತಪಡಿಸಿರುವುದೂ ಸಹ ಪುನಃ ಪತ್ರಿಕೆಗಳಲ್ಲಿ ವರದಿಯಾಗಿದೆ. ಇವರು ವ್ಯವಹಾರ ನೈಪುಣ್ಯತೆ ಇಲ್ಲದೆ ವರ್ತಿಸಿದ್ದಾರೆಂದು ಹೇಳಬಹುದು ; ಅಥವಾ ವ್ಯವಹಾರ ಚಾಣಾಕ್ಷತನ ಇಲ್ಲವೆಂದು ಹೇಳಬಹುದು. ಇವರು ಒಬ್ಬ ಚಿಂತಲಪಲ್ಲಿ ರಾಮಚಂದ್ರರಾಯರಿಗೆ ಒಂದು ಪತ್ರ ಬರೆದಿದ್ದಾರೆ. ಪತ್ರ ಬರೆದ ಲೆಟರ್‌ಹೆಡ್ ಕೆ. ಕೆ. ಮೂರ್ತಿಯವರದು. ಆದರಲ್ಲಿ ನಿಮಗೆ 22-10-72 ರಂದು ಅವಕಾಶ ಒದಗಿಸಿಕೊಟ್ಟಿದ್ದೇವೆ ; ಅದಕ್ಕೆ ಸಂಭಾವನೆ ಆ ಮೇಲೆ ನಿಗದಿ ಮಾಡುತ್ತೇವೆಂದು ಹೇಳಿದ್ದಾರೆ. ಇದಕ್ಕೆ ರುಜು ಮಾಡಿದವರು ನರಸಿಂಹಮೂರ್ತಿ ಎನ್ನುವವರು. ಕಾಗದ ಬರೆದಿರುವವರು ಶ್ರೀನಿವಾಸ ಐಯ್ಯಂಗಾರ್ ಎಂಬವರು. ಪತ್ರ ಬರೆದಿರತಕ್ಕದ್ದು ಚಿಂತಲಪಲ್ಲಿ ರಾಮಚಂದ್ರರಾಯರಿಗೆ. ಇವರು ಸಂಭಾವನೆ ನಿಗದಿ ಮಾಡದಿದ್ದುದರಿಂದ ಒಪ್ಪಿಕೊಳ್ಳುವುದಕ್ಕಾಗುವುದಿಲ್ಲವೆಂದು ಹೇಳಿದರು. ಅದಕ್ಕೆ ಪುನಃ ನಿಮ್ಮ ರೆಮುನರೇಷನ್ 500 ರೂಪಾಯಿ ಎಂದು ಒಂದು ಸೆಂಟೆನ್ಸ್ ಸೇರಿಸಿ ಬರೆದರು. ಇಷ್ಟೆಲ್ಲದರ ಬಗ್ಗೆ ತಮಗೆ ಡೆಲ್ಲಿಯಲ್ಲಿರುವಾಗ ಒಂದು ಮನವಿಯನ್ನು ಸಲ್ಲಿಸಿದ್ದಾರೆ.

4-30 P.M.

ಇನ್ನೊಂದು ಆಪಾದನೆ ಏನೆಂದರೆ, ಅಲ್ಲಿ ಕಲಾವಿದರಿಗೆ ಕೊಟ್ಟಿರುವ ಹಣವೇ ಬೇರೆ ; ಅವರಿಂದ ಪಡೆದಿರುವ ರಶೀತಿಯೇ ಬೇರೆ. ಅಧ್ಯಕ್ಷರ ಕೆಳಗೆ ಇರುವವರು ಇಂತಹ ಅವ್ಯವಹಾರ ಮಾಡಿದ್ದಾರೆಂದು ಕಾಣುತ್ತದೆ ; ಏಕೆಂದರೆ ಥೇರ್‌ಮನರಿಗೆ ನಿಬಿಡವಾದ ಕಾರ್ಯಕ್ರಮ ಇದ್ದಿರಬಹುದು. ಅದೇ ರೀತಿ ದೊಡ್ಡ ಲೆವೆಲಿನವರಿಗೆ ಕಲಾವಿದರಿಗೆ ದೊಡ್ಡ ಮಟ್ಟದಲ್ಲಿ ಇಳಿಕೊಳ್ಳುವುದಕ್ಕೆ ಅವಕಾಶ ಮಾಡಿದ್ದಾರೆ ; ಸಣ್ಣ ಕಲಾವಿದರಿಗೆ ಸಣ್ಣ ಚೆಕ್‌ನಲ್ಲಿ ಕೊಟ್ಟಿದ್ದಾರೆ. ಅದು ಅವರವರ ಕಂಟ್ರಾಕ್ಟ್ ಅಗ್ರಿಮೆಂಟ್ ಪ್ರಕಾರ ಮಾಡಿಕೊಂಡಿರಬಹುದು. ಇನ್ನೊಂದು ವೈಶಿಷ್ಟ್ಯವೇನೆಂದರೆ, ಹಿಂದೆಂದೂ ಮಾಡದ ರೀತಿಯಲ್ಲಿ ಕಲಾವಿದರಿಗೆ ದುಡ್ಡು ಮುಂಚಿತವಾಗಿ ಕೊಟ್ಟಿರುವುದು. ಯಾವಾಗಲೂ ಸಾಂಸ್ಕೃತಿಕ ಕಾರ್ಯಕ್ರಮಗಳು ಆದಮೇಲೆ ಅವರಿಗೆ ಏನು ಹಣ ಕೊಡಬೇಕು, ಅದನ್ನು ಕೊಡುತ್ತಾರೆ. ಇದು ಸಂಪ್ರದಾಯ. ಆದರೆ ಈ ರೀತಿ ಕೊಡಲು ಅಧ್ಯಕ್ಷರ ಕೈಯಲ್ಲಿ ಎಷ್ಟು ಹಣ ಕೊಟ್ಟಿದ್ದೀರೆಂಬುದನ್ನು ತಾವು ಹೇಳಬೇಕು. 5500 ರೂಪಾಯಿ ನಗದು ಹಣ ಕೊಟ್ಟ ಬಗ್ಗೆ ನಾನು ಆ ಮೇಲೆ ಬರುತ್ತೇನೆ. ತಾವು ಅವರ ಕೈಯಲ್ಲಿ ಎಷ್ಟು ಹಣ ಡ್ರಾ ಮಾಡಿ ಕೊಟ್ಟಿದ್ದೀರಿ ? ಇದು ಯಾವ ಒಂದು ಕಾನೂನಿನ ಚೌಕಟ್ಟಿನಲ್ಲಿ ಮಾಡಿದ್ದೀರಿ ? ಹಿಂದೆ ದಸರಾ ಕಾರ್ಯಕ್ರಮಗಳಲ್ಲಿ ಕಲಾವಿದರಿಗೆ ಕಾರ್ಯಕ್ರಮ ಆದಮೇಲೆ ಕೊಡತಕ್ಕದ್ದು ರೂಢಿ. ಉದಾಹರಣೆಗೆ ಮೈಸೂರಿನ ಛಲದಂಕಮಲ್ಲ ಎಂಬ ಪಿಕ್ಚರಿಗೆ ಹಣವಿಲ್ಲ ಸಹಾಯ ಮಾಡಿ ಎಂದು ಕೇಳಿದಾಗ, ಅಡ್ವಾನ್ಸ್ ಕೊಡುವುದಕ್ಕೆ ಬರುವುದಿಲ್ಲವೆಂದು ಮುಖ್ಯ ಮಂತ್ರಿಯವರು ಹೇಳಿದ್ದರು. ಆದ್ದರಿಂದ ಆರ್ಟಿಸ್ಟ್‌ಗಳಿಗೆ ಅಡ್ವಾನ್ಸ್ ಆಗಿ ಹಣ ಕೊಡುವುದಕ್ಕೆ ಏನಾದರೂ ಹುಕುಂ ಮಾಡಿದ್ದಾರೆಯೇ ಎಂಬುದನ್ನು ಹೇಳ

ಬೇಕು. ಈ ಒಂದು ಅವ್ಯವಹಾರದಲ್ಲಿ ರಾಜ್ಯದ ಕಲಾವಿದರ ಮೇಲೆ ಸಾಕಷ್ಟು ಪರಿಣಾಮವನ್ನು ಬೀರಿದೆ. ಪತ್ರಿಕೆಗಳಲ್ಲಿ ಮೂರ್ತಿಯವರ ಹೇಳಿಕೆ ಒಂದೊಂದು ರೀತಿಯಲ್ಲಿ ಬಂದಿದೆ. ಅವರು, ಸಾಕಷ್ಟು ನಮಗೆ ಉತ್ತೇಜನ ಆಗಲಿಲ್ಲ; ಕನ್ನಡ ಕಲಾವಿದರ ಕಾರ್ಯಕ್ರಮಕ್ಕೆ ಸಾಕಷ್ಟು ಜನ ಬರಲಿಲ್ಲ ಎಂದು ಹೇಳಿ, ಕನ್ನಡ ಕಲಾವಿದರಿಗೆ ಏಕೆ ಹೆಚ್ಚಿನ ಮನ್ನಣೆ ಕೊಟ್ಟಿಲ್ಲವೆಂಬುದಕ್ಕೆ ನಮಗರ್ಥನೆ ರೂಪಡಿಲ್ಲ ಹೇಳಿಕೆಗಳನ್ನು ಕೊಟ್ಟಿದ್ದಾರೆ. ಅದೇ ರೀತಿ ಹೊರಗಡೆಯಿಂದ ಬಂದಂತಹ ಹೇಮಮಾಲಿನಿಯವರ ಕಾರ್ಯಕ್ರಮದ ಬಗ್ಗೆಯೂ ಸಹ ಹೇಳಿದ್ದಾರೆ. ಹಾಗೆಯೇ ನಮ್ಮ ಕಲಾವಿದರಿಗೆ ಕೊಟ್ಟ ಹಣ ಎಷ್ಟು, ಹೊರಗಡೆಯಿಂದ ಬಂದ ಕಲಾವಿದರಿಗೆ ಕೊಟ್ಟ ಎಷ್ಟು ಎಂದು ಸಹ ಹೇಳಿದ್ದಾರೆ. ಅಲ್ಲಿ ಬಹುಶಃ ಹಣ ಸಂಪಾದನೆ ಮಾಡುವುದು ಕ್ಯೋನ್ಸರ್ "ಪ್" ಮ್ಯೂಸಿಕ್ ಸಹ ಏರ್ಪಾಡು ಮಾಡಿದ್ದಾರೆಂದು ಕಾಣುತ್ತದೆ. ಇವರು ಕೇವಲ ಹಣ ಸಂಪಾದನೆ ಮಾಡುವ ದೃಷ್ಟಿಯಿಂದ ಇದನ್ನು ಮಾಡುವುದಾಗಿದ್ದರೆ, ಇನ್ನಿತರ ಕೆಲವು ಪ್ರೋಗ್ರಾಂಗಳನ್ನು ಸಹ ಇಡಬಹುದಿತ್ತು.

ಒಬ್ಬ ಇಂಗ್ಲೀಷ್ ಕಲಾವಿದೆಯನ್ನು ಅಮೆರಿಕಾದಿಂದ ಕರೆಸಿ ಈ ಪಾಪ್ ಡ್ಯಾನ್ಸ್ ಮಾಡಿಸಿದ್ದಾರೆ. ಇವರಿಗೆ ಹಣದ ವ್ಯಾಮೋಹ ಇದ್ದರೆ ಸಾಂಸ್ಕೃತಿಕ ಕಾರ್ಯಕ್ರಮದಿಂದಲೇ ಸಂಪಾದನೆ ಮಾಡಬೇಕೇ? ಕ್ಯಾಬರೆ ಡ್ಯಾನ್ಸ್ ಮಾಡಿಸಿ ಹಣ ಸಂಪಾದನೆ ಮಾಡಬಹುದಾಗಿತ್ತು. ಪಾಪ್ ಡ್ಯಾನ್ಸ್ ಮಾಡಿಸಬೇಕಾದ ಅವಶ್ಯಕತೆ ಇರಲಿಲ್ಲ. ಶ್ರೀಮತಿ ಜಾನಕಿ ಅವರಿಗೆ ಕೊಟ್ಟಿರುವ ಹಣ 20 ಸಾವಿರ ರೂಪಾಯಿಗಳು. ಅಪೊತ್ತಿನ ಕಾರ್ಯಕ್ರಮದಲ್ಲಿ ಕಲೆಕ್ಷನ್ ಆಗಿರುವುದು 18 ಸಾವಿರ ರೂಪಾಯಿಗಳು. ಅದರಿಂದ 2 ಸಾವಿರ ರೂಪಾಯಿಗಳು ನಷ್ಟವಾಗಿದೆ. ಶ್ರೀ ಮುಖೇಶ್ ಅವರಿಗೆ 22,500 ರೂಪಾಯಿಗಳನ್ನು ಕೊಟ್ಟಿದ್ದಾರೆ. ಅವರ ಕಾರ್ಯಕ್ರಮದಲ್ಲಿ 16,500 ರೂಪಾಯಿಗಳು ಕಲೆಕ್ಷನ್ ಆಗಿದೆ. ಶ್ರೀಮತಿ ಹೇಮಮಾಲಿನಿ ಅವರಿಗೆ 16 ಸಾವಿರ ರೂಪಾಯಿಗಳನ್ನು ಕೊಟ್ಟಿದೆ. ಅವರ ಕಾರ್ಯಕ್ರಮದಲ್ಲಿ 14,250 ರೂಪಾಯಿಗಳು ಕಲೆಕ್ಷನ್ ಆಗಿದೆ. ಆದರೆ ನಮ್ಮ ಕಲಾವಿದರಿಗೆ ಒಂದು ಸಾವಿರ ಅತಿ ಹೆಚ್ಚು ಎಂದರೆ 2 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದಾರೆ. ಆ ಕಾರ್ಯಕ್ರಮದಲ್ಲಿ ಸಾಕಷ್ಟು ಕಲೆಕ್ಷನ್ ಆಗಿಲ್ಲ ಎಂದು ಹೇಳಿದ್ದಾರೆ ಜನಸಂಖ್ಯೆ ಇಲ್ಲದೆ ಇರುವ ಕಡೆ ಒಂದು ಕಾರ್ಯಕ್ರಮ ಇಟ್ಟು ನಡೆಸುವುದು. ಇನ್ನೊಂದು ಕಡೆ ಬೆಳಕವಾಡಿ ರಾಜಯ್ಯಂಗಾರ್ ಅವರ ಕಾರ್ಯಕ್ರಮ ಇಟ್ಟು ಅವರ ಬದಲಿಗೆ ಶ್ರೀನಿವಾಸಯ್ಯಂಗಾರ್ ಅವರ ಅಥವಾ ಬೇರೆ ಯಾರದೋ ಕಾರ್ಯಕ್ರಮ ನಡೆಸುವುದಾದರೆ ಆ ಕಾರ್ಯಕ್ರಮಕ್ಕೆ ಜನ ಯಾರು ಬರುತ್ತಾರೆ. ಈ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ 2.5 ಲಕ್ಷ ರೂಪಾಯಿಗಳು ಪೂರ್ತಿ ಖರ್ಚಾಗಿಲ್ಲ. ಈ ಕಾರ್ಯಕ್ರಮಕ್ಕೆ ಎಷ್ಟು ಹಣ ಖರ್ಚಾಗಿದೆ ಎಂಬುದನ್ನು ವಿವರಣೆ ಕೊಡಬೇಕು. ಮತ್ತು ಈ ಕಾರ್ಯಕ್ರಮಕ್ಕೆ 1 ಲಕ್ಷ 18 ಸಾವಿರ ರೂಪಾಯಿಗಳು ಏನು ಖರ್ಚಾಗಿದೆ ಇದರ ವ್ಯವಹಾರದಲ್ಲಿ ಕೇವಲ ಕಾರ್ಯಕ್ರಮವನ್ನು ನಿಗದಿ ಮಾಡುವುದಕ್ಕೆ 9,500 ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಇದು ಸರಿಯಲ್ಲ. ಕಲಾವಿದರಿಗೆ ಟ್ರಂಕಾಲ್ ಮಾಡಿ ಅಥವಾ ಪತ್ರ ಬರೆದು ಅವರಿಂದ ವಿಚಾರವನ್ನು ತಿಳಿದು ಕೊಳ್ಳಬಹುದಾಗಿತ್ತು. ಕೇವಲ ಕಾರ್ಯಕ್ರಮವನ್ನು ನಿಗದಿ ಮಾಡುವುದಕ್ಕೆ ಇಷ್ಟು ಹಣ ಖರ್ಚು ಮಾಡುವ ಅವಶ್ಯಕತೆ ಇರಲಿಲ್ಲ ಎಂದು ನನ್ನ ಭಾವನೆ. ಎಲ್ಲಕ್ಕೂ ಮುಖ್ಯ ಮಂತ್ರಿಗಳ ಹೆಸರು ಹೇಳಿ ಬಣ್ಣ ಹಚ್ಚಬೇಕಾದ ಅವಶ್ಯಕತೆ ಇಲ್ಲ. ಆ ಮಟ್ಟಕ್ಕೆ ನಾನು ಹೋಗುವುದೂ ಇಲ್ಲ. ನಾನು ಇಷ್ಟು ಮಾತ್ರ ಹೇಳುತ್ತೇನೆ. ಯಾರಿಗೆ ವ್ಯವಹಾರ ನಡೆಸಕ್ಕಂಥಾ ಜವಾಬ್ದಾರಿಯನ್ನು ವಹಿಸುತ್ತಾರೆಯೋ ಅವರು ಅವರ ಜವಾಬ್ದಾರಿಯನ್ನು ಸರಿಯಾದ ರೀತಿಯಲ್ಲಿ ನಿರ್ವಹಣೆ ಮಾಡದೇ ಹೋದರೆ ಅದರ ಹೊಣೆಗಾರಿಕೆಯನ್ನು ನೀವು ಹೊರಬೇಕಾಗುತ್ತದೆ. ಅದು ಒಳ್ಳೆಯದೋ ಅಥವಾ ಕೆಟ್ಟದ್ದೋ ಅದು ನಿಮ್ಮ ತಲೆಯಮೇಲೆ ಉಳಿದುಕೊಳ್ಳುತ್ತದೆ. ಯಾರು ಅಜಾಗರೂಕತೆಯಿಂದ ವರ್ತಿಸುತ್ತಾರೆಯೋ ಅವರು ಆ ಒಂದು ಪಾಪದ ಹೊರೆಗೆ ಸಿಕ್ಕಿಕ್ಕದಿರಲಿ ಆದ್ದರಿಂದ ಈ ಬಗ್ಗೆ ಸರ್ಕಾರದವರು ಎಚ್ಚರಿಕೆಯನ್ನು ವಹಿಸಬೇಕು ಎಂದು ನನ್ನ ಅಭಿಪ್ರಾಯ. ದಸರಾ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಶಾಸಕರಿಗೆ ಮತ್ತು ದೊಡ್ಡ ದೊಡ್ಡ ಟಾಪ್ ಆಫೀಸರುಗಳಿಗೆ ಪಾಸ್ ಕೊಟ್ಟಿರುತ್ತಾರೆ. ಗರೀಬಿ ಹಠಾವೋ ಸರ್ಕಾರ ಹೇಮಮಾಲಿನಿ ಡ್ಯಾನ್ಸ್ ಕಾರ್ಯಕ್ರಮ ನಡೆಸಿದರೆ ಹೊಟ್ಟೆಗೆ ಇಲ್ಲದೇ ಇರುವ ಜನ ಅಷ್ಟೊಂದು ದುಡ್ಡು ಕೊಟ್ಟು ಯಾರು ನೋಡುತ್ತಾರೆ. 25-50 ಪ್ಲೆಸೆ ಮಾಡಿದ್ದರೆ ಜನಗಳು ಯಾರಾದರೂ ಹೋಗಿ ನೋಡುತ್ತಿದ್ದರು. ಶ್ರೀಮಾನ್ ಕೃಷ್ಣ ಅವರು ಬೇಕಾದರೆ ನೋಡಬಹುದು. ನಮ್ಮಂತಹ ಸಣ್ಣ ಮನುಷ್ಯರು ಅದನ್ನು ನೋಡುವುದಕ್ಕಾಗುತ್ತದೆಯೇ? ಜಯಲಲಿತ, ಹೇಮಮಾಲಿನಿ ಅವರ ಡ್ಯಾನ್ಸ್ ವ್ಯವಸ್ಥೆ ಮಾಡಿ ಅದರಲ್ಲಿ ಸಮಾಜದಲ್ಲಿ ಪ್ರತಿಷ್ಠಿತ ವ್ಯಕ್ತಿಗಳಿಗೆ, ಟಾಪ್ ಮೋಸ್ಟ್ ಆಫೀಸರುಗಳಿಗೆ ಕಾಂಪ್ಲಿಮೆಂಟರಿ ಪಾಸುಗಳನ್ನು ಕೊಡುವುದಕ್ಕೆ ಒಂದು ನಿವೇಶನವನ್ನು ಕಲ್ಪಿಸಿಕೊಂಡಿದ್ದಾರೆ. ಹಣದ ಸಂಪಾದನೆಗೆ ಬೇರೆ ಮಾರ್ಗ

(ಶ್ರೀ ಎಚ್. ಡಿ. ದೇವೇಗೌಡ)

ವನ್ನು ಅನುಸರಿಸುವುದಾಗಿತ್ತು. ಈ ಸಾಂಸ್ಕೃತಿಕ ಕಾರ್ಯಕ್ರಮವಲ್ಲಿ ಕೇವಲ ಪ್ರತಿಷ್ಠಿತ ವ್ಯಕ್ತಿಗಳಿಗೆ, ಮಾತ್ರ ಅವಕಾಶ ಇತ್ತು. ಸಮಾಜದಲ್ಲಿರುವಕ್ಕೆ ಕೆಳಮಟ್ಟದ ಜನ ಏನು ಇದ್ದಾರೆ ಅವರಿಗೆ ಅದರ ಸವಿಯನ್ನು ಊಣ ಮಾಡುವುದಕ್ಕೆ ಅವಕಾಶ ಇರುತ್ತದೆಯೇ ? ಸಾರ್ವಜನಿಕ ಹಣವನ್ನು ವೆಚ್ಚ ಮಾಡತಕ್ಕ ಕಾಲದಲ್ಲಿ ಸಮಾಜದಲ್ಲಿ ಕೇವಲ ಪ್ರತಿಷ್ಠಿತ ವ್ಯಕ್ತಿಗಳಿಗೆ ಕಾಂಪ್ಲಿಮೆಂಟರಿ ಪಾಸು ಗಳನ್ನು ಕೊಟ್ಟಿದ್ದರು. ಇನ್ನು ಜಯಲಲಿತ ಪ್ರಕರಣಕ್ಕೆ ಬರುತ್ತೇನೆ.

ಶ್ರೀ ಎಚ್. ಸಿದ್ದವೀರಪ್ಪ.— ಇದುವರೆಗೆ ಪೀಠಿಕೆಯಾಯಿತು, ಈಗ ವಿಷಯಕ್ಕೆ ಬರುತ್ತಿದ್ದಾರೆ.

ಶ್ರೀ ಎಚ್. ಡಿ. ದೇವೇಗೌಡ.—ಮೈಸೂರಿನ ಮಾಜೀ ಅರಸರು ತಮಗೆ ಮತ್ತು ನನ್ನ ಗುರುಗಳಾದ ಶ್ರೀ ಎ. ಜಿ. ರಾಮಚಂದ್ರರಾಯರಿಗೆ ಕಾಂಪ್ಲಿಮೆಂಟರಿ ಪಾಸ್‌ಗಳನ್ನು ಕಳಿಸಿ ಕೊಡುತ್ತಿದ್ದರಿಂದ ತಾವುಗಳು ದಸರಾಕ್ಕೆ ಹೋಗುತ್ತಿದ್ದಿರಿ. ಆದರೆ ನನಗೆ ಯಾವ ಪಾಸ್‌ಗಳು ಸಹ ಬರುತ್ತಿರಲಿಲ್ಲ. ಹಿಂದೆ ನಾನು ಚಿಕ್ಕವನಾಗಿದ್ದಾಗ, ಅಂದರೆ 8ನೇ ವಯಸ್ಸಿನಲ್ಲಿ ಅಂಬಾರಿ ತೋರಿಸುವುದಕ್ಕೆ ನನ್ನ ತಂದೆ ಮೈಸೂರಿಗೆ ಕರೆದುಕೊಂಡು ಹೋಗಿದ್ದರು. ಅಲ್ಲಿಂದೀಚೆಗೆ ನಾನು ಹೋಗಿಯೇ ಇಲ್ಲ.

ಶ್ರೀ ಡಿ. ದೇವರಾಜ ಅರಸ್.—ಮುಂದಿನ ಸಲ ನೋಡುವುದಕ್ಕೆ ತಾವು ಬನ್ನಿ.

ಶ್ರೀ ಎಚ್. ಡಿ. ದೇವೇಗೌಡ.—ಸಮಾಜವಾದೀ ಪದ್ಧತಿಯಲ್ಲಿ ಜಂಬೂಸವಾರಿ ಇರಬಾರದೆಂದು ರದ್ದು ಪಡಿಸಿದ್ದೀರಿ. ಆದ್ದರಿಂದ ನಾನು ಬರುವ ಅವಶ್ಯಕತೆಯೇ ಇಲ್ಲ. ಮಾನ್ಯ ಅಜೀಜ್‌ಸೇಠ್ ಅವರೇ ದಸರಾ ವಸ್ತುಪ್ರದರ್ಶನದ ಕಮಿಟಿಗೆ ಚೇರ್‌ಮನ್ ಆಗಿದ್ದರಿಂದ ಅವರು ದಿನದ 24 ಗಂಟೆಯೂ ಅಲ್ಲಿಯೇ ಇರುತ್ತಿದ್ದರು, ದಸರಾ ವಸ್ತುಪ್ರದರ್ಶನದ ಅಂಗಡಿಗಳ ಮುಂದೆ ಹುರಿಗಾಳನ್ನು ಬಾಯಿಗೆ ಎಸೆದುಕೊಂಡು ತಿನ್ನುತ್ತಾ ಓಡಾಡಿಕೊಂಡಿದ್ದರು ಎಂದು ಕೇಳಿದ್ದೇನೆ.

ಶ್ರೀ ಅಜೀಜ್‌ಸೇಠ್.—ನನಗೆ ಹುರಿಗಾಳನ್ನು ತಿನ್ನಲು ಹಲ್ಲೇ ಇಲ್ಲ. ಅಂದಮೇಲೆ ನಾನು ಹುರಿಗಾಳನ್ನು ತಿನ್ನುತ್ತಿದ್ದೆ ಎಂದು ಹೇಳಿದ ರು ಎಂತಹವರು, ಕೇಳಿದವರು ಎಂತಹವರು ಎಂದು ಕೇಳುತ್ತೇನೆ.

ಶ್ರೀ ಟಿ. ಎಂ. ಮಂಜುನಾಥ್.—ಈ ಪ್ರಕರಣ ನಡೆದ ಮೇಲೆ ತಮ್ಮ ಹಲ್ಲುಗಳು ಬಿದ್ದು ಹೋಯಿತೋ ಅಥವಾ ಅದಕ್ಕೂ ಮೊದಲೇ ಬಿದ್ದುಹೋಯಿತೋ ಎಂದು ತಿಳಿಸಬೇಕು.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಮಂತ್ರಿಗಳ ಹಲ್ಲು ಬಿದ್ದು ಹೋಗಿದ್ದು ಯಾವ ಸಂದರ್ಭದಲ್ಲಿ ಎಂಬುದನ್ನು ತಿಳಿಸಬೇಕು.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಅಜೀಜ್‌ಸೇಠ್ ಅವರು ದಸರಾ ವಸ್ತು ಪ್ರದರ್ಶನದ ಕಮಿಟಿಗೆ ಚೇರ್‌ಮನ್ ಆಗಿದ್ದರಿಂದ, ಅವರು ದಿನದ 24 ಗಂಟೆಯೂ ಅಲ್ಲಿಯೇ ಇರುತ್ತಿದ್ದರಿಂದ ಮತ್ತೊಂದು ಸಬ್ ಕಮಿಟಿಯಾದರೂ ಏತಕ್ಕಾಗಿ ಬೇಕಾಗಿತ್ತು ? ಆ ಒಂದು ಕಾರ್ಯಕ್ರಮ ಮುಗಿಯುವವರೆಗೂ ಅವರು ಅಲ್ಲಯೇ ಇದ್ದಿದ್ದರಿಂದ ಈ ಒಂದು ವ್ಯವಹಾರ ಅವರ ಮುಖಾಂತರ್ವದಲ್ಲಿ ಮತ್ತು ಶ್ರೀಮಾನ್ ಕೆ. ಕೆ. ಮೂರ್ತಿಯವರ ನೇತೃತ್ವದಲ್ಲಿ ನಡೆದಿದೆ.

ಅಧ್ಯಕ್ಷರು.—ತಾವು ಜಾಗ್ರತೆ ಮಾಡಿಸಬೇಕು. ಏಕೆಂದರೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕಾಗಿದೆ.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಮಂತ್ರಿಗಳ ಉತ್ತರಕ್ಕೆ ಹೆಚ್ಚು ಕಾಲ ಬೇಕಾಗಿಲ್ಲ ಎಂದು ಕಾಣುತ್ತದೆ.

Sri AZEEZ SAIT.—They do not want any reply from the Government. They want to make a Statement of their own accord.

ಶ್ರೀ ಎಚ್. ಡಿ. ದೇವೇಗೌಡ.—ಜಯಲಲಿತ ಪ್ರಕರಣದ ಬಗ್ಗೆ ಹೇಳುವುದಾದರೆ, ಅವರು ಮೊದಲು ದಸರಾ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗವಹಿಸುತ್ತೇನೆಂದು ಒಪ್ಪಿಗೆ ಕೊಟ್ಟರು. ಆ ರೀತಿ ಒಪ್ಪಿಗೆ ಕೊಟ್ಟದ್ದು 13ನೇ ತಾರೀಖು ಎಂದು ಕಾಣುತ್ತದೆ. ನಂತರ ಅಡ್ವಾನ್ಸ್ ಆಗಿ 4 ಸಾವಿರ ರೂಪಾಯಿಗಳನ್ನು ಡ್ರಾಫ್ಟ್ ರೂಪದಲ್ಲಿ ಅವರಿಗೆ ಕಳಿಸಿಕೊಟ್ಟಾಗ ಅವರು ಅದನ್ನು ತೆಗೆದುಕೊಳ್ಳಲಿಲ್ಲ ಎಂದು ಶ್ರೀಮಾನ್ ಮೂರ್ತಿಯವರು ಆಪಾದನೆ ಮಾಡಿದ್ದಾರೆ. ನಂತರ 5500 ರೂಪಾಯಿಗಳನ್ನು ಅಡ್ವಾನ್ಸ್ ಆಗಿ ಕಳಿಸಿಕೊಟ್ಟಾಗ ಅವರ ಪ್ರತಿನಿಧಿ ಒಬ್ಬರು ತೆಗೆದು

ಕೊಂದರು ಎಂದು ತಿಳಿಸಿ ಬರೆ. ಈ ಮಧ್ಯೆ ಒಂದು ಗುಂಪಿನ ಜನರು, ಈ ಜನರನ್ನು ನಾನು ಯಾವುದೇ ರಾಜಕೀಯ ಹಿನ್ನೆಲೆಯುಳ್ಳ ನೋಡುವುದಕ್ಕೆ ಹೊಗುವುದಿಲ್ಲ, ಅವರು ಕನ್ನಡದ ಅಭಿಮಾನಿಗಳು ಎಂದು ಹೇಳಬಹುದು; ಅವರು ಹೇಳಿದರು, ಏನೆಂದರೆ ಜಯಲಲಿತ ಏನಾದರು ಮೈಸೂರು ದಸರಾ ಸಾರ್ವಜನಿಕ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರೆ ಪ್ರತಿಭಟನೆ ಮಾಡುತ್ತೇವೆಂದು. ಹಿಂದೆ ಒಂದು ಸಲ ಜಯಲಲಿತ ಅವರು ನೆನು ತಪಿಳುನಾಡಿನ ಶ್ರೀರಂಗಂ ಫ್ಯಾಮಿಲಿಯಲ್ಲಿ ಹುಟ್ಟಿದವಳು ಎಂದು ಹೇಳಿಕೆ ಕೊಟ್ಟಿದ್ದರಿಂದ, ಕೆಲವರು ಕೋಪ ಮಾಡಿಕೊಂಡು ಈ ರೀತಿ ಪ್ರತಿಭಟನೆ ಮಾಡುತ್ತೇವೆಂದು ತಿಳಿಸಿದ್ದರಿಂದ ಅವರು 15ನೇ ತಾರೀಖು ಒಂದು ಪತ್ರವನ್ನು ಬರೆದರು. ತಮ್ಮ ಕಾರ್ಯಕ್ರಮವನ್ನು ಯಾವ ಕಾರಣಗಳಿಗಾಗಿ ರದ್ದು ಮಾಡಬೇಕಾಯಿತು ಎಂಬುದನ್ನು ತಮ್ಮ ಪತ್ರದಲ್ಲಿ ಅವರು ತಿಳಿಸಿದ್ದರು. ಅವರ ಪತ್ರದ ಸಾರಾಂಶ ಈ ರೀತಿ ಇದೆ:—

> "I understand that there is anti-Jayalalitha movement in Mysore City and it seems they are planning to demonstrate violently at the time of my dance performance on 20th October 1972. It has been brought to my notice that pamphlets have already been printed rising objections for giving my performance in the Mysore City and many persons have entered into contracts by investing millions of rupees with me. Considering my personal safety as well as the huge investments of the Producers I regret my inability to accept to give dance performance in Mysore City on 20th October."

ಶ್ರೀ ಎಸ್. ಎಂ. ಕೃಷ್ಣ. ಕನ್ನಡನಾಡಿನಲ್ಲಿ ಹುಟ್ಟಿ, ಕನ್ನಡವಾಡಿನ ಸಂಬಂಧವನ್ನು ಕಳೆದುಕೊಂಡಿರುವುದರಿಂದ, ಮೈಸೂರಿನಲ್ಲಿ ಏನಾದರು ಬಂದು ನರ್ತನ ಮಾಡಿದರೆ ನಾವುಗಳು ಚೆಳುವಳಿ ಮಾಡುತ್ತೇವೆಂದು ಜಯಲಲಿತ ಅವರಿಗೆ ಏನಾದರು ಕನ್ನಡ ಚಳುವಳಿಗಾರರ ಪರವಾಗಿ ಯಾರಾದರು ಕಾಗದ ಬರೆದಿದ್ದರೇ? ಅಥವಾ ಶ್ರೀಮಾನ್ ವಾಟಾಳ್ ನಾಗರಾಜ್ ಅವರು ಏನಾದರು ಕನ್ನಡ ಚಳುವಳಿಗಾರರ ಪರವಾಗಿ ಬರೆದಿದ್ದರೆ ಎಂಬುದನ್ನು ತಿಳಿಸಬೇಕು?

ಶ್ರೀ ವಾಟಾಳ್ ನಾಗರಾಜ್.—ನಾವು ಆ ರೀತಿ ಏನೂ ಕಾಗದವನ್ನು ಅವರಿಗೆ ಬರೆದಿಲ್ಲ. ಯಾರಾದರೂ ನಮ್ಮ ಹೆಸರನ್ನು ಉಪಯೋಗಿಸಿಕೊಂಡು ಆ ರೀತಿ ಬರೆದಿರಬಹುದು. ಶ್ರೀಮಾನ್ ಕೆ. ಕೆ. ಮೂರ್ತಿಯವರೇ ಏನಾದರು ಆ ರೀತಿ ಮಾಡಿಸಿರಬಹುದು. ಆ ರೀತಿ ಪತ್ರವನ್ನು ಬರೆದಿರುವುದು ಇದ್ದರೆ ಅದನ್ನು ಸಭೆಯ ಮುಂದೆ ಇಡಿ, ಅದು ನಾವು ಬರೆದಿದ್ದೇ ಅಥವಾ ಅಲ್ಲವೇ ಎಂಬುದನ್ನು ನೋಡುತ್ತೇವೆ. ಆ ದಿನ ನಾವು ಸ್ಟುಡಿಯೋ ಹತ್ತಿರ ಗಲಾಟೆ ಮಾಡುವುದಕ್ಕೆ ಕಳಿಸಿದ್ದ ಜನರು ಕಾಫೀಪುಡಿ ಅಂಗಡಿಯಲ್ಲಿ ಕೆಲಸ ಮಾಡುವ ಜನರಾಗಿದ್ದರು ಎಂಬುದು ನನಗೆ ತಿಳಿದು ಬಂದಿದೆ.

ಶ್ರೀ ಎಚ್. ಡಿ. ದೇವೇಗೌಡ.—ಒಪ್ಪಿಕೊಂಡಿರುವ ಕಾರ್ಯಕ್ರಮಕ್ಕೆ ಬರುವುದಕ್ಕಾಗುವುದಿಲ್ಲ ಎಂದು ಕಾಗದ ಬರೆದಿದ್ದು ಅಲ್ಲದೆ, 18ನೇ ತಾರೀಖು ಚೆಲಗ್ಯಾಂನ್ನು ಸಹ ಕೊಟ್ಟರು. ಆಂಟಿ ಜಯಲಲಿತ ಮೂವ್‌ಮೆಂಟ್ ಶ್ರೀಮಾನ್ ವಾಟಾಳ್ ನಾಗರಾಜ್ ಅವರ ನೇತೃತ್ವದಲ್ಲಿ ನಡೆಯುತ್ತೇ ಅಥವಾ ಅವರ ಹೆಸರನ್ನು ಉಪಯೋಗಿಸಿಕೊಂಡು ಬೇರೆಯವರು ಚಳುವಳಿ ನಡೆಸಿದರೇ ಎಂಬುದು ಇಲ್ಲಿ ಮುಖ್ಯವಲ್ಲ. ಜಯಲಲಿತ ಅವರು 15ನೇ ತಾರೀಖೇ ತಮ್ಮ ಕಾರ್ಯಕ್ರಮವನ್ನು ರದ್ದು ಮಾಡಿದ್ದೇನೆ ಎಂದು ಲಿಖಿತ ಮೂಲಕ ತಿಳಿಸಿದ ಮೇಲೂ ಸಹ, ಸಾಂಸ್ಕೃತಿಕ ಕಾರ್ಯಕ್ರಮದ ಅಧ್ಯಕ್ಷರು ವೃತ್ತ ಪತ್ರಿಕೆಗಳಲ್ಲಿ ಜಾಹೀರಾತನ್ನು ಕೊಡುತ್ತಲೇ ಇದ್ದರು, 18ನೇ ತಾರೀಖು ಚೆಲಗ್ಯಾಂನ್ನು ಸಹ ಕೊಟ್ಟರು. ಆದರೂ ಜಾಹೀರಾತನ್ನು ಕೊಡಲಾಗುತ್ತಿತ್ತು. ಇದರಿಂದಲೇ ಗೊತ್ತಾಗುತ್ತದೆ, ಅಧ್ಯಕ್ಷರು ತಮ್ಮ ಕರ್ತವ್ಯವನ್ನು ಏಷ್ಟರಮಟ್ಟಿಗೆ ಪಾಲನೆ ಮಾಡಿದ್ದಾರೆಂಬುದು. ಈ ವಿಚಾರದಲ್ಲಿ ಸಾಂಸ್ಕೃತಿಕ ಕಾರ್ಯಮಂಡಳಿಯ ಅಧ್ಯಕ್ಷರ ವ್ಯವಹಾರ ವೈಕ್ಷಣಿಯನ್ನು ನಾವು ಕ್ಲೇಖಬೇಕಾಗುತ್ತದೆ. ಇದರಿಂದ ಸರ್ಕಾರಕ್ಕೆ ಕೆಟ್ಟ ಹೆಸರು ಬರುವುದಿಲ್ಲವೆ? ಅವರೇನಾದರು ಅಡ್ವಾನ್ಸಾಗಿ ತೆಗೆದುಕೊಂಡ 550 ರೂಪಾಯಿಗಳನ್ನು ಥಾಪಸ್ ಕೊಡದಿದ್ದರೆ ಅವರ ಮೇಲೆ ಸೆಕ್ಷನ್ 420 ಪ್ರಕಾರ ಅಥವಾ ಸೆಕ್ಷನ್ 390 ಪ್ರಕಾರ ಕೇಸ್ ಹಾಕಬಹುದಾಗಿತ್ತು. ಆದರೆ ಅವರು 15ನೇ ತಾರೀಖೇ ತಮ್ಮ ಕಾರ್ಯಕ್ರಮವನ್ನು ರದ್ದು

(ಶ್ರೀ ಹೆಚ್. ಡಿ. ದೇವೇಗೌಡ)

ಮಾಡಿರುವುದಾಗಿ ತಿಳಿಸಿದ ಮೇಲೂ ಸಹ, ಸಾಂಸ್ಕೃತಿಕ ಕಾರ್ಯಕ್ರಮದ ಅಧ್ಯಕ್ಷರು 20ನೇ ತಾರೀಖಿನವರೆಗೆ ಸಾರ್ವಜನಿಕರ ಗಮನವನ್ನ ಸೆಳೆಯುವುದಕ್ಕಾಗಿ ಪತ್ರಿಕೆಗಳಿಗೆ ಜಾಹೀರಾತು ಕೊಡುವ ಅವಶ್ಯಕತೆ ಏನಿತ್ತು. ಇದು ತಪ್ಪಲ್ಲವೇ?

5-00 P.M.

ಅವರು 20ನೇ ತಾರೀಖು ಸಂಜೆ ಮೈಸೂರಿಗೆ ಬಂದರು ಮತ್ತು ಅವರಿಗೆ ಮೈಸೂರಿನಲ್ಲಿರುವ ಪ್ರಿಮಿಯರ್ ಸ್ಟುಡಿಯೋದಲ್ಲಿ 21ನೇ ತಾರೀಖಿನಿಂದ 27ನೇ ತಾರೀಖಿನವರೆಗೆ ಅಲ್ಲಿ ನಡೆಯುವ ಚಿತ್ರೀಕರಣದ ಕಾರ್ಯಕ್ರಮವನ್ನು ಅವರು ಒಪ್ಪಿ ಕೊಂಡು ಮೈಸೂರಿಗೆ 20ನೇ ತಾರೀಖು ರಾತ್ರಿನೇ ಬಂದರು. ಅವರು ಮೈಸೂರಿನಲ್ಲಿ ಹೊಟೆಲ್ ಮೆಟ್ರೊಪೋಲ್‌ನಲ್ಲಿ ಇಳಿದುಕೊಂಡಿದ್ದರು. ಮೈಸೂರಿಗೆ ಬಂದ ಮೇಲೆ 21ನೇ ತಾರೀಖು ಬೆಳಗ್ಗೆ ಹೊಟೆಲ್ ಮೆಟ್ರೊಪೋಲ್‌ನಿಂದಲೇ ಅವರ ಚಿಕ್ಕಪ್ಪ ಅವರ ಜೊತೆ ಬಂದಿದ್ದರು ಎಂದು ತೋರುತ್ತೆ ಅವರೇ ಈ ಸಾಂಸ್ಕೃತಿಕ ಉತ್ಸವದ ಅಧ್ಯಕ್ಷರನ್ನು ಕಾಂಟಾಕ್ಟ್ ಮಾಡಿ ಅವರಿಗೆ ಹಣವನ್ನು ವಾಪಸ್ಸು ಕೊಡಬೇಕು ಎಂದು ಮತ್ತು ಅವರಿಗೆ ಯಾವ ರೈಲು ಸರಿಹೋಗುತ್ತದೆ ಎನ್ನುವುದಕ್ಕಾಗಿ ಫೋನ್ ಮೂಲಕ ಪ್ರಯತ್ನ ಮಾಡಿದರು, ಅವರ ಪ್ರೈವೇಟ್ ಕ್ಯಾರಿಯರ್‌ನವರೇ ಸೋ ಅವರ ಕಾರ್ಯಕ್ರಮವನ್ನು ರದ್ದು ಮಾಡಿ ಬಹಳ ತೊಂದರೆ ಮಾಡಿದರಿ ಎನ್ನುವ ರೀತಿಯಲ್ಲಿ ವರ್ತನೆ ಮಾಡಿದರಂತೆ ಇದಕ್ಕಾಗಿ ನಿಮ್ಮ ಮೇಲೆ ಕಾರ್ಯಕ್ರಮ ತೆಗೆದ ಕೊಳ್ಳಬೇಕು ಆದರೆ ನಿಮ್ಮಿಂದ ಹಣ ತೆಗೆದುಕೊಳ್ಳುವ ಮಾತು ಬೇರೆ ಇರಲಿ ಎಂದರಂತೆ. ಇವರ ಮೇಲೆ ಕೆಲವು ಆರೋಪಣೆಗಳನ್ನೂ ಮಾಡಿ ಹಣ ವಾಪಸು ಪಡೆಯುವುದಕ್ಕೆ ಅವರ ಸಮ್ಮತಿ ಸೂಚಿಸಲಿಲ್ಲ. ಮಾರನೇ ದಿನ ಬೆಳಗ್ಗೆ ಸುಮಾರು 11 ಗಂಟೆಗೆ ಶ್ರೀಮಾನ್ ಮೂರ್ತಿಯವರು ದೇವರಾಜ ಪೋಲೀಸು ಸ್ಟೇಷನ್ನಿಗೆ ಹೋಗಿ ಒಂದು ಕಾಪ್ಲೆಂಟು ಕೊಟ್ಟು ಅದರಲ್ಲಿ 20ನೇ ತಾರೀಖಿನ ಕಾರ್ಯಕ್ರಮಕ್ಕಾಗಿ ನೀವು 5,500 ರೂಪಾಯಿಗಳನ್ನು ಮುಂಗಡವಾಗಿ ತೆಗೆದು ಕೊಂಡು ಅಂದಿನ ಕಾರ್ಯಕ್ರಮಕ್ಕೆ ಬಂದೆ ಮೋಸವಾಗಿ ನಮಗೆ ಇನ್ನೂ ಹಣ ಕೂಡ ಕೊಟ್ಟಿಲ್ಲ, ಇದಕ್ಕಾಗಿನಿಮ್ಮ ಮೇಲೆ ಸೆಕ್ಷನ್ 420 ರ ಪ್ರಕಾರ ಪಿರ್ಯಾದು ಮಾಡಿದ್ದೇವೆ ಎಂದು ಹೇಳಿದ್ದಾರೆ. ಇದಾದ ಮೇಲೆ ಇಲ್ಲಿಂದ ಒಬ್ಬರು ಡಿವೈ ಎಸ್ ಪಿ ಹಾಗೂ ಒಬ್ಬರು ಸರ್ಕಲ್ ಇನ್ಸ್‌ಪೆಕ್ಟರು ಸುಮಾರು 11 ಗಂಟೆ ವೇಳೆಯಲ್ಲಿ ಶ್ರೀಮತಿ ಜಯಲಲಿತಾರವರು ಸ್ಟೇಜು ಮೇಲೆ ಹೋಗಲು ಅವರು ಉಡುಗೆ ತೊಡಿಗೆಗಳಿಂದ ಸಿದ್ಧರಾಗುತ್ತಿದ್ದರು. ಅದೇ ಉಡಿಗೆಯಲ್ಲೇ ಅಲ್ಲಿಗೆ ಬಂದರು.

ಶ್ರೀ ಡಿ. ದೇವರಾಜ ಅರಸ್.—ಆಗ ನೀವು ಎಲ್ಲಿದ್ದಿರಿ ಇದು ನಿಮಗೆ ಹೇಗೆ ಗೊತ್ತಾಯಿತು?

ಶ್ರೀ ಹೆಚ್. ಡಿ. ದೇವೇಗೌಡ.—ಅವರೇ ಪ್ರೈವೇಟ್ ಸೆಕ್ರೆಟರಿಯವರಿಗೆ ಕಾಗದ ಬರೆದಿದ್ದಾರೆ. ಅದರಲ್ಲಿ ಈ ವಿವರಗಳೆಲ್ಲಾ ಇವೆ.

ಶ್ರೀ ಎಚ್. ಸಿದ್ದವೀರಪ್ಪ.—ಪ್ರಧಾನಿಯವರಿಗೆ ಬರೆದ ಕಾಗದ ನಿಮಗೆ ಹೇಗೆ ಬಂತು?

ಶ್ರೀ ಹೆಚ್. ಡಿ. ದೇವೇಗೌಡ.—ಶ್ರೀ ನಿಜಲಿಂಗಪ್ಪನವರು ಭದ್ರಾವತಿಗೆ ಬರೆದ ಕಾಗದ ಶ್ರೀ ಸಿದ್ದವೀರಪ್ಪನವರಿಗೆ ಸಿಗೋದಾದರೆ ಇಂತಹ ಪತ್ರ ನಮಗೆ ಸಿಗುವುದಿಲ್ಲವೇ? ನಮಗೆ ಹಲವಾರು ಪತ್ರಗಳು ಬರುತ್ತವೆ, ಆದರೆ ಅವನ್ನು ನಮಗೆ ಬಂದ ಹಾಗೆ ಉಪಯೋಗ ಮಾಡುತ್ತೇವೆ. ಇಲ್ಲಿ ನಡೆದಿರತಕ್ಕದ್ದು ಶ್ರೀಮಾನ ಮೂರ್ತಿಯವರು ಮಾಡಿರುವ ಅಪಾದನೆಗಳ ಬಗ್ಗೆ ಶ್ರೀಮತಿ ಜಯಲಲಿತಾರವರು ದೂರಿನ ಒಂದು ಕಾಪಿ ಕೊಟ್ಟು ಅದರ ವಿಚಾರ ನೋಡಿಕೊಳ್ಳೋಣ ಎಂದರೂ ಅದನ್ನು ಕೊಡದೆ ಇಲ್ಲಿನ ಅಧಿಕಾರಿಗಳು ನಮ್ಮನ್ನೆ ಆಕ್ಕೆಮುನ್ನು ಕನ್‌ಫ್ಯೂಸ್ ಮಾಡಿದ್ದಾರೆ. ನನ್ನ ಅಡ್ವಾನ್ಸನ್ನು ವಾಪಸು ಕಳುಹಿಸಿರುವಾಗಿದೆ ಮತ್ತು ಈಗ ನನಗೆ ಕೆಲಸ ಹೆಚ್ಚು, ಬಿಡುವಿಲ್ಲ. ನಿಮ್ಮ ದೂರಿನ ಕಾಪಿ ಕೊಡಿ ನಾನು ಲಾಯರು ಅಥವಾ ಅವರ ಲೀಗಲ್ ಅಸಿಸ್ಟೆಂಟುರ ಮೂಲಕ ತಿಳಿದು ಹೇಳುತ್ತೇನೆ ಎಂದು ಹೇಳಿದರು ಮತ್ತು ಅದೇ ಸ್ಟುಡಿಯೋದಿಂದಲೇ ಒಂದು ಲೈಟ್‌ನಿಂಗ್ ಫೋನು ಕಾಲನ್ನು ಹಾಕಿದರು ಮತ್ತು ಅದು ಮೆಚೂರು ಆಗುವುದಕ್ಕೆ ಮೊದಲೇ ಇಲ್ಲಿನ ಪೋಲೀಸು ಅಧಿಕಾರಿಗಳು ಅವರಿಗೆ ಅವಕಾಶ ಕೊಡಲಿಲ್ಲ ಮತ್ತು ಅವರನ್ನು 'ನೀವು ಬರದೇ ಹೋದರೆ ನಿಮ್ಮನ್ನು ಫೋರ್ಸ್ ಮಾಡಿ ಪೋಲೀಸು ಸ್ಟೇಷನ್ನಿಗೆ ಕರೆದೊಯ್ಯಬೇಕಾಗುತ್ತದೆ'ಎಂದು ಹೇಳಿದರಂತೆ, ಇನ್ನು ಇದು ಅತಿರೇಕವಾಗಿ ಹೋಗುತ್ತದೆ ಎಂದು ಸ್ಟೇಜು ಮೇಲಿದ್ದ ಡ್ರೆಸ್‌ನಲ್ಲೇ ಇವರನ್ನು ಲಕ್ಷ್ಮೀಪುರಂ ಪೋಲೀಸ್ ಸ್ಟೇಷನ್‌ಗೆ ಕರೆದೊಯ್ದರು. ಇದರೊಳಗೆ ಜುರಿಸ್‌ಡಿಕ್ಷನ್ ಬರುತ್ತೋ ಏನೋ?

ಶ್ರೀ ಅಜೀಜ್ ಸೇಟ್.—ಮೈಸೂರಿನಲ್ಲಿ ದೇವರಾಜ ಸ್ಟೇಷನ್ ಸೆಂಟ್ರರ್ ಸ್ಟೇಷನ್ ಇದಕ್ಕೆ ಲಷ್ಕರು ಹಾಗೂ ಲಕ್ಷ್ಮಿಪುರಂ ಸ್ಟೇಷನ್‌ಗಳು ಸೇರುತ್ತವೆ. ಇವರ ಜ್ಯುರಿಸ್ ಡಿಕ್ಷನ್ ಪ್ರಕಾರ ಅಲ್ಲಿಗೆ ಕರೆದುಕೊಂಡು ಹೋಗಿರಬಹುದು,

ಶ್ರೀ ಹೆಚ್. ಡಿ. ದೇವೇಗೌಡ.—ಇದರಲ್ಲಿ ಇಂತಿಂತಹ ಪೋಲೀಸು ಸ್ಟೇಷನ್‌ಗಳು ಜ್ಯುರಿಸ್ ಡಿಕ್ಷನ್ ಬರುತ್ತವೆ ಎಂದು ಮಾನ್ಯ ಮಂತ್ರಿಗಳು ಹೇಳುತ್ತಾರೆ. ಅವರು ಮೈಸೂರಿನವರು, ಅದು. ಅವರಿಗೆಲ್ಲ ಚೆನ್ನಾಗಿ ಗೊತ್ತು. ಅಂತೂ ಇವರನ್ನು ಲಕ್ಷ್ಮೀಪುರಂ ಪೋಲೀಸು ಸ್ಟೇಷನ್‌ಗೆ ಕರೆದುಕೊಂಡು ಹೋದರು, ಅವರಿಗೆ ದೂರಿನ ಕಾಪಿ ಕೊಟ್ಟು ಅವರಿಂದ ಹೇಳಿಕೆ ಪಡೆದು ಅನಂತರ ಅವರನ್ನು ವಾಪಸು ಕಳುಹಿಸಿಕೊಟ್ಟರು ಎಂದು ಇದೆ. ಇದಾದ ಮೇಲೆ ನುಮಾರು ನೂರು ಜನಕ್ಕಿಂತ ಹೆಚ್ಚು ಜನ ಸೇರಿದ ಗುಂಪೊಂದು ಎಂದರೆ ಗೂಂಡಾಗಳೋ, ಇಲ್ಲವೋ ರೌಡಿಗಳೋ, ಇಲ್ಲವೇ ಶ್ರೀ ಮೂರ್ತಿಗಳಿಂದ ನೇಮಿತರಾದವರೋ ಏನೋ ಗೊತ್ತಿಲ್ಲ. ಇವರು ಸ್ಟುಡಿಯೋ ಒಳಕ್ಕೆ ನುಗ್ಗಿ ಈ ಅಮ್ಮನವರ ಮೇಲೆ ಕೈ ಮಾಡಲು ಪ್ರಯತ್ನ ಮಾಡಿದ್ದಾರೆ. ಆಗ ಇಲ್ಲಿನ ಸ್ಟುಡಿಯೋದವರು ಪೋಲೀಸಿನವರಿಗೆ ಕರೆ ಕಳುಹಿಸಲು ಇಲ್ಲಿಗೆ ಮೂರು ಜನ ಕಾನ್‌ಸ್ಟೇಬಲ್‌ಗಳು ಬಂದರು. ಪ್ರಾಯಶಃ ಹೊರಗಡೆ ಇನ್ನೂ ಹೆಚ್ಚು ಜನ ಪೋಲೀಸಿನವರು ಬಂದಿರಬಹುದು. ತಾವು ರಾಜ್ಯದ ಹೊಣೆಗಾರಿಕೆಯನ್ನು ಇಂದು ಹೊತ್ತಿರತಕ್ಕಂತಹವರು, ಯಾರೇ ಇಂದು ದೇಶದಲ್ಲಿ ತಪ್ಪು ಮಾಡಲಿ ಅಂತಹವರನ್ನು ಸಮರ್ಥನೆ ಮಾಡಬೇಡಿ. ಒಂದು ವೇಳೆ ಅಧಿಕಾರಿಗಳು ಕರ್ತವ್ಯ ಲೋಪ ಮಾಡಿದ್ದರೆ ಅಂತಹವರಿಗೆ ಶಿಕ್ಷೆ ಮಾಡಿದರೆ ನಿಮ್ಮ ಪ್ರತಿಷ್ಠೆ ಇನ್ನೂ ಹೆಚ್ಚುತ್ತದೆ. ಇಲ್ಲಿಗೆ ಮೂರು ಜನ ಪೋಲೀಸು ಕಾನ್‌ಸ್ಟೇಬಲ್‌ಗಳು ಬಂದಿದ್ದರು.

ಶ್ರೀ ಡಿ. ದೇವರಾಜ ಅರಸ್.—ತಪ್ಪು ಮಾಡಿದವರಿಗೆ ಶಿಕ್ಷೆ ಮಾಡುವುದಿಲ್ಲ ಎಂದು ಏಕೆ ಇಲ್ಲಿ ಮಾತನಾಡಲು ಹೋಗುತ್ತೀರಿ? ತಪ್ಪು ಮಾಡಿದ್ದರೆ ಅಂತಹವರಿಗೆ ಶಿಕ್ಷೆ ಮಾಡಲೇ ಬೇಕಾಗುತ್ತದೆ.

ಶ್ರೀ ಹೆಚ್. ಡಿ. ದೇವೇಗೌಡ.—ಈ ಘಟನೆ ನಡೆದು ನುಮಾರು ಒಂದು ತಿಂಗಳಾದರೂ ಕೂಡ ಸರಕಾರ ಇದುವರೆಗೆ ಏನಾದರೂ ಕಾರ್ಯಕ್ರಮ ತೆಗೆದುಕೊಂಡಿದೆಯೇ? ಅದು ನನಗಂತೂ ಗೊತ್ತಿಲ್ಲ. ಒಂದು ವೇಳೆ ತಕ್ಕ ಕಾರ್ಯಕ್ರಮ ತೆಗೆದುಕೊಂಡಿದ್ದರೆ ಅದನ್ನು ನಾನು ಸ್ವಾಗತ ಮಾಡುತ್ತೇನೆ. ಆಗ ಸ್ಟುಡಿಯೋ ನೌಕರ ವರ್ಗದವರು ಮತ್ತು ಇವರ ಮೇಲೆ ಗೂಂಡಾಗಳು ಅಟ್ಯಾಕ್ ಮಾಡಲು ಇಲ್ಲಿ ಕೂಗುತ್ತ ಗಲಭೆ ಮಾಡಿದರು ಮತ್ತು ಕೆಲವರಿಗೆ ಏಟುಗಳು ಕೂಡ ಬಿದ್ದವು. ಇದಾದ ಮೇಲೆ ಪ್ರಾಯಶಃ ಇನ್ನೂ ಕೆಲ ಪೋಲೀಸಿನವರು ಹೊರಗಡೆ ಜೀಪಿನಲ್ಲಿದ್ದರು ಎಂದು ಕಾಣುತ್ತೆ. ಅವರೂ ಬಂದರು ಮತ್ತು ಕೆಲ ಹಿರಿಯ ಅಧಿಕಾರಿಗಳೂ ಹೊರಗಿದ್ದರು, ಇವಾದ ನಂತರ 22ನೇ ತಾರೀಖು ಬೆಳಿಗ್ಗೆ ಮೈಸೂರಿನಲ್ಲಿರುವ ಒಬ್ಬರು ರಾಯರನ್ನು ಕರೆದುಕೊಂಡು ಇವರ ಚಿಕ್ಕಪ್ಪ ಶ್ರೀ ಮೂರ್ತಿಗಳನ್ನು ಕಂಡು ಅವರಿಗೆ ದುಡ್ಡು ಕೊಡಲು ಹೋದಾಗ ಅದಕ್ಕೆ ಮೂರ್ತಿಗಳು ಅವರಿಗೆ ನಾನು ರಶೀತಿ ಕೊಡುವುದಕ್ಕಾಗುವುದಿಲ್ಲ, ಈಗಾಗಲೇ ಇದರ ಬಗ್ಗೆ ಕೇಸಾಗಿರುವುದರಿಂದ ನಾನು ಏನು ಮಾಡಲಾಗುವುದಿಲ್ಲ, ನುಮ್ಮನೆ ರಶೀತಿ ಇಲ್ಲದೆ ಹಣ ಕೊಡುವುದಾದರೆ ಅದನ್ನು ಹಾಗೇ ತೆಗೆದುಕೊಳ್ಳುತ್ತೇನೆಂದು ಹೇಳಿದರಂತೆ. ಅದಕ್ಕೆ ಅವರು ವಾಪಸು ಮಾಡುತ್ತೇವೆಂದು ಹೇಳಿ ಇನ್ನೂ ಏನೇನೋ ಹೇಳಿದರಂತೆ. ವಾಪಸು ಬಂದಮೇಲೆ ಹೋಟೆಲ್ ಹತ್ತಿರ 500—600 ಜನ ಸೇರಿದರು. ಮತ್ತೆ ಈಯಮ್ಮ ಅಲ್ಲಿಂದ ತಪ್ಪಿಸಿಕೊಂಡು ಪ್ರಾಣ ಉಳಿಸಿಕೊಳ್ಳುವುದೇ ಕಷ್ಟವಾಯಿತು. ಹಿಂದುಗಡೆ ಬಾಗಿಲಿನಿಂದ ಒಂದು ಕಾರನ್ನು ತರಿಸಿಕೊಂಡು ಪಾರಾಗಬೇಕಾಯಿತು. ಆಮೇಲೆ ಅವರ ನೌಕರವರ್ಗದವರ ಮೇಲೆ ಅಟ್ಯಾಕ್ ಮಾಡಿದ್ದಾರೆ, ಹೊಡೆದಿದ್ದಾರೆ. ನಾನು ಯಾವುದನ್ನೂ ಉತ್ಪ್ರೇಕ್ಷೆ ಮಾಡಿ ಹೇಳಬೇಕಾದ ಅವಶ್ಯಕತೆ ಇಲ್ಲ. ಪೋಲೀಸ್ ಅಧಿಕಾರಿಗಳ ನೆರವಿನಿಂದ ಲಾ ಅಂಡ್ ಆರ್ಡರ್ ಮೇಂಟೇನ್ ಮಾಡಬೇಕಾದ್ದಿಲ್ಲ. ಯಾರೇ ಸರ್ಕಾರದ ಆಡಳಿತವನ್ನು ನಡೆಸಲಿ, ಆಯಂತ್ರದಿಂದಲೇ ಕಾನೂನನ್ನು ಪರಿಪಾಲನೆ ಮಾಡಬೇಕಾಗುತ್ತದೆ. ಆದರೆ ಅವರ ವ್ಯವಹಾರ ಅತಿರೇಕಕ್ಕೆ ಹೋದಾಗ ಅದನ್ನು ಸಮರ್ಥನೆ ಮಾಡತಕ್ಕ ಪಾಪದ ಕೆಲಸವನ್ನು ಮಾಡಬಾರದು.

ಶ್ರೀ ಡಿ. ದೇವರಾಜ ಅರಸ್.—ಸಮರ್ಥನೆ ಮಾಡುವ ಪಾಪದ ಕೆಲಸವನ್ನೂ ಮಾಡಬಾರದು, ಉತ್ಪ್ರೇಕ್ಷೆ ಮಾಡಿ ಹೇಳುವ ಪಾಪದ ಕೆಲಸವನ್ನೂ ಮಾಡಬಾರದು.

ಶ್ರೀ ಎಚ್. ಡಿ. ದೇವೇಗೌಡ.—ಉತ್ಪ್ರೇಕ್ಷೆ ಮಾಡತಕ್ಕ ಹವ್ಯಾಸ ನನಗೆ ಬೇಕಾಗಿಲ್ಲ. ಅದರಿಂದ ಬಹುಶಃ ಒಂದು ಸ್ಥಾನದ ಪ್ರತಿಷ್ಠೆಯನ್ನು ಹೆಚ್ಚಿಸಿಕೊಳ್ಳಬೇಕಾದ್ದಿಲ್ಲ. ತಮ್ಮಲ್ಲಿರುವ ಸಿ. ಐ. ಡಿ. ಅಧಿಕಾರಿಗಳಿಂದ ವಿಚಾರಣೆ ಮಾಡಿಸಿ, ಅವರ ರಿಪೋರ್ಟ್ ತರಿಸಿ ಸತ್ಯಾಂಶವೇನಿದೆ ಎನ್ನುವುದನ್ನು ಹೇಳಿ. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಈ ಅಪಾವನೆ ನನ್ನೆ, ಈ ಹೊತ್ತಿನದಲ್ಲ. ಅದರ ಬಗ್ಗೆ ಚಕಾರ ಕೂಡ ಎತ್ತಿಲ್ಲ. ಒಂದು ವೇಳೆ ಅಧಿಕಾರಿಗಳು ಅತಿರೇಕ

(ಶ್ರೀ ಹೆಚ್. ಡಿ. ದೇವೇಗೌಡ)

ಪಾಗಿ ನಡೆದುಕೊಂಡಿದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತಕ್ಕ ಅಧಿಕಾರವಿದೆ. ನನಗೆ ಬಂದಿರುವ ವರ್ತಮಾನದ ಪ್ರಕಾರ ಅಧಿಕಾರಿಗಳು ಸರಿಯಾದ ರೀತಿಯಲ್ಲಿ ವರ್ತನೆಮಾಡಿಲ್ಲ. ನಾನು ಉತ್ಪ್ರೇಕ್ಷೆ ಮಾಡಿ ಹೇಳುತ್ತಿಲ್ಲ. ನನಗೆ ಆ ವರ್ತಮಾನ ಬಂದಿದೆ, ಆಡಳಿತ ಯಂತ್ರದಿಂದ ಬೇರೆ ವಿಚಾರಣೆ ನಡೆಸಿ ಎಂದು ಮಾತ್ರ ನಾನು ಹೇಳುತ್ತಿದ್ದೇನೆ.

Sri D. DEVARAJ URS.—Madam Speaker, I am not objecting to what he says according to the information he has got; but I would only request him not to jump to any conclusion thereby to say you are likely to suppress. That is what I am trying to explain. Please don't assume things. If you have the information, you have every right to say that. If I feel that what you say or the information that you have got, if I find it to be correct, I will say yes; I do not hesitate to accept it. If I find that your information is not correct, then I will say that it is not correct.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಮುಖ್ಯಮಂತ್ರಿಗಳು ವಿಷಯವನ್ನು ಇಲ್ಲಿಯವರೆಗೂ ಬಿಡಬೇಕಾಗಿದ್ದಿರಲಿಲ್ಲ, ಕ್ರಮ ತೆಗೆದುಕೊಳ್ಳಬಹುದಾಗಿತ್ತು. ನಾನು ಮೊದಲೇ ಹೇಳಿದ ಹಾಗೆ ಸಾಂಸ್ಕೃತಿಕ ಕಾರ್ಯಕ್ರಮದ ಅಧ್ಯಕ್ಷರು ಮಾಡಿರತಕ್ಕ ಎಲ್ಲ ಅವ್ಯವಹಾರಕ್ಕೂ ಮುಖ್ಯ ಮಂತ್ರಿಗಳೇ ಹೊಣೆ ಎಂದು ಹೇಳುವುದಕ್ಕೆ ನಾನು ತಯಾರಾಗಿಲ್ಲ. ಮುಖ್ಯಮಂತ್ರಿಗಳು ರಕ್ಷಣೆ ಕೊಟ್ಟು ಮಾಡಿಸಿದ್ದಾರೆ ಎಂದೂ ಹೇಳುತ್ತಿಲ್ಲ. ಸಾಂಸ್ಕೃತಿಕ ಕಾರ್ಯಕ್ರಮದ ಅಧ್ಯಕ್ಷರು ಮಾಡಿರತಕ್ಕ ಅವ್ಯವಹಾರದ ಹೊಣೆಯನ್ನು ಇವರೂ ಹೊರಬೇಕಾಗುತ್ತದೆಯಾದ್ದರಿಂದ ಜಾಗರೂಕತೆಯಿಂದ ವರ್ತನೆ ಮಾಡುವುದು ಒಳಿತು ಎಂದು ಹೇಳುತ್ತ ಇದ್ದೇನೆ.

ಪ್ರಧಾನಿಯವರೆಗೂ ದೂರು ಹೋಗಿದೆ. ಸಿ. ಬಿ. ಐ. ನಿಂದ ವಿಚಾರಣೆಯಾಗುತ್ತಿದೆ ಎಂದು ಕಾಣುತ್ತದೆ.

Sri H. SIDDAVEERAPPA.—If the matter is seized by the C.B.I. probably in the interests of truth and justice, it is better to wait.

ಶ್ರೀ ಎಚ್. ಡಿ. ದೇವೇಗೌಡ.—ನಾನು ಕೊನೆಯದಾಗಿ ಒಂದು ಮಾತು ಹೇಳುತ್ತೇನೆ. ಈ ಒಂದು ಘಟನೆ ಬಗ್ಗೆ, ಈ ಸಲದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಆ ಸಮಿತಿಯ ಅಧ್ಯಕ್ಷರು ನಡೆದುಕೊಂಡಿರತಕ್ಕ ವ್ಯವಹಾರದ ಬಗ್ಗೆ ಪೂರ್ಣವಾದ ವಿಚಾರಣೆ ಆಗಬೇಕು, ಏಕಕ್ಷೇಯವಾಗಿ ಬಾರದ, ನಿಷ್ಪಕ್ಷಪಾತವಾದ ವಿಚಾರಣೆಯಾಗಬೇಕು. ಕೇಸು ಇನ್ನೂ ಕೋರ್ಟಿಗೆ ಹೋಗಿಲ್ಲ. ಅದನ್ನು ವಾಪಸು ತೆಗೆದುಕೊಳ್ಳುವುದಕ್ಕೆ ನಗರಪಾಲಿಕೆಯವರು ನಡೆಯುತ್ತಿದೆ ಎಂದು ನಾನು ಕೇಳಿದ್ದೇನೆ. ಒಂದು ವೇಳೆ ಕೇಸನ್ನು ಹಿಂತೆಗೆದುಕೊಂಡರೆ ಸಂತೋಷ. ಆದರೆ ಈ ರೀತಿಯ ಅಜಾಗರೂಕತೆಯ ವರ್ತನೆಯಿಂದ ಸರ್ಕಾರದ ಆಡಳಿತದಲ್ಲಿ ಅವ್ಯವಹಾರ ನಡೆಯಬಾರದು. ಅದರ ಬಗ್ಗೆ ಈ ಹೊತ್ತು ಕೂಲಂಕಷವಾಗಿ ವಿಚಾರಣೆಯಾಗಬೇಕೆಂಬ ಬಗ್ಗೆ ಈ ಮನೆಯ ತುರತೆಯಿಂದ ಇದೆ. ಆದ್ದರಿಂದ ನಿಷ್ಪಕ್ಷಪಾತವಾದ ವಿಚಾರಣೆಯಾಗಬೇಕು ಎನ್ನುವುದನ್ನು ನಾನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಮುಂದೆ ಇಂಥ ಕಾರ್ಯಕ್ರಮಗಳು ನಡೆಯುವಾಗ ರಾಜ್ಯದ ಕಲಾವಿದರಿಗೆ, ಕನ್ನಡ ಕಲಾವಿದರಿಗೆ ಸರಿಯಾದ ಮಾನ್ಯತೆ ದೊರೆಯಲಿಲ್ಲ ಎನ್ನುವ ವಿಷಾದ ನಮಗೆ ಇದೆ. ಸಂಗೀತ ನಾಟಕ ಅಕಾಡೆಮಿ ಇದೆ. ಅವರ ಸಲಹೆಯನ್ನಾದರೂ ಪಡೆಯಬಹುದಾಗಿತ್ತು. ಪರರಾಜ್ಯಗಳಲ್ಲಿ ನಡೆಯುವ ಕಾರ್ಯಕ್ರಮಗಳಲ್ಲಿ ಪ್ಲೆನೂರಿನ ಕಲಾವಿದರಿಗೆ ಮಾನ್ಯತೆ ಸಿಕ್ಕಿದೆಯೇ ಎನ್ನುವುದರ ಬಗ್ಗೆ ಕೂಡ ಚರ್ಚೆ ಮಾಡಬೇಕಾಗುತ್ತದೆ. ಈ ಹೊತ್ತು ತಾವು ದಯವಿಟ್ಟು ಇದರ ಬಗ್ಗೆ ನಿಷ್ಪಕ್ಷಪಾತವಾಗಿ ವಿಚಾರಣೆ ನಡೆಸಿ, ಈ ಸಭೆಗೆ ವರದಿಯನ್ನು ಕೊಡಬೇಕೆಂದು ಪ್ರಾರ್ಥನೆ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).— ಮಾನ್ಯ ಅಧ್ಯಕ್ಷರೇ, ಈಗಾಗಲೇ ಈ ಹಗರಣದ ಬಗ್ಗೆ ವಿಫಲವಾದಂಥ ಚರ್ಚೆ ನಡೆದಿದೆ. ಅವರು ಪ್ರಸ್ತಾಪ ಮಾಡಿದ ವಿಷಯಗಳನ್ನೇ ಪುನಃ ಪ್ರಸ್ತಾಪ ಮಾಡುವುದಕ್ಕೆ ನಾನು ಹೋಗುವುದಿಲ್ಲ. ಮುಖ್ಯವಾಗಿ ಈಗ ಆಗಿರತಕ್ಕಂಥ ಘಟನೆ ಎಲ್ಲರ ಮನಸ್ಸನ್ನು ನೋಯಿಸತಕ್ಕಂಥ ಘಟನೆಯಾಗಿದೆ. ಒಬ್ಬ ಕರಾಪಿಡೆಗೆ ಕುವಾರಿ ಜಯಲಲಿತಾ ಅವರಿಗೆ ಈ ರಾಜ್ಯದಲ್ಲಿ ಈ ಒಂದು ದುಃಸ್ಥಿತಿ ಬರಬೇಕಾದರೆ ಹಳ್ಳಿಗಳಲ್ಲಿರುವ ಮಹಿಳೆಯರ ಸ್ಥಿತಿ ಏನಾಗಬಹುದು ಎನ್ನುವ ಭಯ ಈ ರಾಷ್ಟ್ರದಲ್ಲಿ ಮೂಡಿದೆ. ಈ ರಾಜ್ಯದಲ್ಲಿ ಈ ಒಂದು ಘಟನೆ ನಡೆದಿರುವುದು ನಮಗೆ ಒಂದು ರೀತಿಯ ಖೇದ ಭಾವನೆ ಉಂಟು ಮಾಡಿದೆ. ಈ ಉತ್ಸವದಲ್ಲಿ ಭಾಗವಹಿಸಲು ಅವರು ತಮ್ಮ ಕಾರ್ಯಕ್ರಮವನ್ನು ಕೊಡುವಾಗ ಒಂದು ಕಾಂಟ್ರಾಕ್ಟ್ ಆಗಿದೆ. It is purely a Civil contract entered i to between Kumari Jaya Lalitha and the Exhibition Committee. ಅವರು ಆ ಕಾಂಟ್ರಾಕ್ಟ್‌ನ್ನು ಬೋನಾ ಫೈಡ್ ಇಂಟೆನ್‌ಷನ್‌ನಿಂದ ರದ್ದು ಪಡಿಸಿದರು.

ಶ್ರೀ ಡಿ. ದೇವರಾಜ ಅರಸ್.—ಆ ವಿಷಯ ನಿಜ ಉಂಟೇ ಇಲ್ಲವೇ ಎನ್ನುವುದು ನಿಮಗೆ ಹೇಗೆ ಗೊತ್ತು.

ಶ್ರೀ ಕಾಗೋಡು ತಿಮ್ಮಪ್ಪ.—ಅವರು ಬರೆದಂಥ ಕಾಗದದಿಂದ ಸ್ಪಷ್ಟವಾಗಿ ಗೊತ್ತಾಗುತ್ತದೆ. ಅವರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದರೆ ಎಲ್ಲಿ ಏನು ಅನಾಹುತವಾಗುತ್ತದೋ ಎನ್ನುವ ಭಯದಿಂದ ಅವರು ತಮ್ಮ ಕಾಂಟ್ರಾಕ್ಟ್‌ನ್ನು ರದ್ದು ಪಡಿಸುವುದಕ್ಕೆ ಹೋದರು ಇದರಿಂದ ಏನಾದರೂ ಲಾಕ್ಸಾನು ಆದರೆ ಸಿವಿಲ್ ಲಯಬಲಿಟಿ ಆಗಬೇಕೇ ವಿನಃ ಕ್ರಿಮಿನಲ್ ಲಯಬಿಲಿಟಿ ಆಗುವುದಕ್ಕೆ ಅವಕಾಶವಿಲ್ಲ. ಸಿವಿಲ್ ಲಯಬಿಲಿಟಿ ಆಗಿದ್ದರೆ ಆ ನಷ್ಟವನ್ನು ಭರ್ತಿ ಮಾಡುವುದಕ್ಕೆ ಸಿವಿಲ್ ಆಕ್ಷನ್ ಆಗಬೇಕೇ ವಿನಃ ಕ್ರಿಮಿನಲ್ ಆಕ್ಷನ್ ಆಗುವುದಿಲ್ಲ. ಪೋಲೀಸ್ ಅಧಿಕಾರಿಗಳು ಈ ಕೇಸನ್ನು ಸರಿಯಾಗಿ ತಿಳಿದುಕೊಳ್ಳದೇ, ಇದನ್ನು ಸರಿಯಾಗಿ ಸ್ಟಡಿ ಮಾಡದೆ ಯಾರದೋ ಕೆಲವರ ಹೇಳಿಕೆಯನ್ನು ಕೇಳಿಕೊಂಡು ಅವರ ಮೇಲೆ ದಬ್ಬಾಳಿಕೆ ನಡೆಸುವುದಕ್ಕೆ ಹೋಗಿದ್ದಾರೆ ಎಂದು ಹೇಳುತ್ತೇನೆ. ಮತ್ತು ಅವರು ಸ್ಪೇಚೆಯಿಂದಲೇ ಈ ವರ್ತನೆ ಮಾಡಿದ್ದಾರೆ ಎಂದು ಗೊತ್ತಾಗುತ್ತದೆ. ಆದುದರಿಂದ ತಮ್ಮ ಮುಖಾಂತರ ಮುಖ್ಯಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಕುವಾರಿ ಜಯಲಲಿತಾರವರು ಪೋಲೀಸ್ ರಕ್ಷಣೆ ಬೇಕೆಂದು ಕೇಳಿಕೊಂಡರೂ ಅವರಿಗೆ ರಕ್ಷಣೆ ಕೊಡದೆ ಅವರ ಮೇಲೆನೇ ಕ್ರಮ ತೆಗೆದುಕೊಂಡದ್ದು ಬಹಳ ಅನ್ಯಾಯವಾಗಿದೆ. ಆದುದರಿಂದ ಇದಕ್ಕೆ ಸಂಬಂಧಪಟ್ಟ ಡಿ.ವೈ.ಎಸ್. ಪಿ. ಆಗಲಿ, ಎಸ್. ಪಿ. ಆಗಲಿ ಅವರ ಮೇಲೆ ಕೂಡಲೇ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯ ಪಡಿಸುತ್ತೇನೆ. ಮಾನ್ಯ ಅಧ್ಯಕ್ಷರೇ, ಒಬ್ಬ ಹೆಣ್ಣುಮಗಳಿಗೆ ರಕ್ಷಣೆ ಕೊಟ್ಟರೆ ಆದು ರಾಜ್ಯದ ಎಲ್ಲಾ ಹೆಣ್ಣು ಮಕ್ಕಳಿಗೂ ರಕ್ಷಣೆ ಸಿಕ್ಕಿದಂತಾಗುತ್ತದೆ ಎಂದು ನನ್ನ ಅಭಿಪ್ರಾಯ. ಆದುದರಿಂದ ಕುಮಾರಿ ಜಯಲಲಿತಾರವರ ಮೇಲೆ ಪೋಲೀಸ್ ಅಧಿಕಾರಿಗಳು ಏನು ವರ್ತನೆ ಮಾಡಿದ್ದಾರೋ ಆದಕ್ಕೆ ಸಂಬಂಧಪಟ್ಟವರು ಯಾರೇ ಇರಲಿ ಈ ಸಂದರ್ಭದಲ್ಲಿ ಅವರ ಬಗ್ಗೆ ಸ್ಪಷ್ಟವಾದ ವಿಚಾರಣೆ ನಡೆಯಬೇಕು. ಮಾನ್ಯ ಮುಖ್ಯಮಂತ್ರಿಗಳು ಇದನ್ನು ಇಂಟೆಲಿಜೆನ್ಸ್ ಬ್ಯೂರೋಗೆ ಆಗಲಿ, ವಿಜಿಲೆನ್ಸ್ ಕಮಿಷನ್‌ಗೆ ಆಗಲಿ ವಿಚಾರಣೆ ಮಾಡಲು ಒಪ್ಪಿಸಿ ನಿಜವಾದ ಅಂಶಗಳನ್ನು ಅವರಿಂದ ತರಿಸಿಕೊಂಡು ಸಂಬಂಧಪಟ್ಟ ಪೋಲೀಸ್ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಅರೀತಿ ಮಾಡದೇ ಹೋದರೆ ಈ ಒಬ್ಬ ಹೆಣ್ಣುಮಗಳ ಮೇಲೆ ಮಾಡಿದಂಥ ಅನಾಚಾರಕ್ಕೆ ರಾಜ್ಯದ ಜನತೆ ಮತ್ತು ನಾವೆಲ್ಲ ಹೊಣೆಯಾಗಬೇಕಾಗುತ್ತದೆ ಎನ್ನುವ ದಷ್ಟಿಯಿಂದ ಈ ದಿಶೆಯಲ್ಲಿ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ಪುಟ್ಟಸ್ವಾಮಯ್ಯ.—ನಮ್ಮಾನ್ಯ ಅಧ್ಯಕ್ಷಣಿಯವರೇ, ದುರ್ದೈವವೋ ಅಥವಾ ದುರಾದೃಷ್ಟವೋ ಈ ಘಟನೆ ನಡೆದು ಹೋಯಿತು. ಜನಪ್ರಿಯ ಮಂತ್ರಿಮಂಡಲದ ಮೇಲೆ ಇದರ ಗಾಳಿ ಬಡಿದ ರೀತಿಯನ್ನು ನೋಡಿದರೆ ನನಗೆ ತುಂಬಾ ಸಂಕಟವಾಗುತ್ತದೆ. ಕಾರಣ ಏನೆಂದರೆ ಬಡವರ ಉದ್ಧಾರಕ್ಕಾಗಿ ಬಂದಿರತಕ್ಕಂಥ ಜನಕ್ಕೆ ಅಂಬಲಿ ಕುಡಿಯುವವನಿಗೆ ಮೀಸೆ ತಿಕ್ಕುವವನ ನೊಬ್ಬ ಎಂಬಂತೆ ಇದ್ದಾರೆ. ಇದುವರೆಗೆ ನಡೆದುಕೊಂಡು ಬಂದಂಥ ಪದ್ಧತಿ ಏನೆಂದರೆ ಯಾವಾಗಲೂ ಈ ದಸರಾ ಸಮಿತಿಗೆ ಮಾನ್ಯ ವಿದ್ಯಾಮಂತ್ರಿಗಳು ಅಧ್ಯಕ್ಷರಾಗುತ್ತಿದ್ದರು. ಈ ಸಾರಿ ಮಾನ್ಯ ಅಜೀಜ್ ಸೇಟ್‌ರವರು ಈ ದಸರಾ ಸಮಿತಿಯ ಅಧ್ಯಕ್ಷರಾಗಿದ್ದಾರೆ. ಇಡೀ ದೇಶದ ಜನ ಅಂಬಲಿ ಕುಡಿಯುತ್ತಾ ಇರುವಾಗ ಮೀಸೆ ತಿಕ್ಕುವವನು ಏತಕ್ಕೆ ಬೇಕು? ಇವರಿಗೆ ಮೀಸೆ ಇದೆಯೋ ಇಲ್ಲವೋ ಗೊತ್ತಿಲ್ಲ. ಮೀಸೆ ತಿಕ್ಕುವುದಕ್ಕೆ ಕೈಹಾಕುತ್ತಾರೆ; ಮೀಸೆ ಇಲ್ಲದಿದ್ದರೆ ಜುಟ್ಟಿಗೆ ಕೈ ಹಾಕುತ್ತಾರೆ, ಜುಟ್ಟು ಇಲ್ಲದಿದ್ದರೆ ಸೊಂಟಕ್ಕೆ ಕೈ ಹಾಕುತ್ತಾರೆ. ಈ ರೀತಿ ಶ್ರೀಮಾನ್ ದೇವರಾಜ್ ಅರಸ್‌ರವರ ಗತಿಯಾಗಿದೆ. ನಮ್ಮ ರಾಜ್ಯದ ಮಂತ್ರಿಗಳು

(ಶ್ರೀ ಬಿ. ಪುಟ್ಟಸ್ವಾಮಯ್ಯ)

ಹೀಗಿದ್ದಾರಲ್ಲಾ, ನಮ್ಮ ರಾಜ್ಯದ ಜನಗಳು ಅನ್ನ ಅನ್ನ ಎಂದು ಸಾಯುತ್ತಾ ಇದ್ದಾರಲ್ಲಾ ಎಂದು ಶ್ರೀಮಾನ್ ದೇವರಾಜ್ ಅರಸ್‌ರವರು ಚಿಂತೆಗೊಳಗಾಗಿದ್ದಾರೆ. ವಿರೋಧ ಪಕ್ಷದವರು ಎಷ್ಟು ಕೂಗಿದರೂ ಇದರ ಬಗ್ಗೆ ಚಿಂತೆ ಮಾಡುತ್ತಾ ಇಲ್ಲ. ಜನ ಅಂಬಲಿಗೆ ಚಿಂತೆ ಮಾಡುತ್ತಿದ್ದರೆ ನಾಯಕರಿಗೆ ಮೀಸೆ ತಿಕ್ಕುವವನ ಚಿಂತೆಯಾಗಿದೆ. ಅನೇಕ ಸಾರಿ ನಾನು ಹೇಳಿದ್ದೇನೆ ನೀವು ಗಂಡು ಜನರಂತೆ ತಲೆ ಎತ್ತಿ ಹೋರಾಡಬೇಕು ಎಂದು. ಸರ್ಕಾರ ನಡೆಸತಕ್ಕಂಥ ಜನ ಗಂಡು ಹುಲಿಯಾಗಿರಬೇಕು. ಅವರ ಬಗ್ಗೆ ಯಾರಾದರೂ ಏನಿ ಮಾತನಾಡಿದರೆ ನಾನು ಯಾವ ಪಕ್ಷದಲ್ಲೇ ಇರಲಿ ನನ್ನ ಮನಸ್ಸಿಗೆ ನೋವಾಗುತ್ತದೆ. ಇದು ನಮ್ಮ ದೇಶದ ಗೌರವ ಘನತೆಯ ಪ್ರಶ್ನೆ. ಅವರು ಒಳ್ಳೆಯ ಕೆಲಸ ಮಾಡಿದರೆ ನಾನು ಯಾವ ಪಕ್ಷದಲ್ಲಿಯೇ ಇರಲಿ ಅವರನ್ನು ಮುಕ್ತ ಕಂಠದಿಂದ ಹೊಗಳುವ ಜನ ನಾವು. ರಾಜಕೀಯದಲ್ಲಿ ಭೇದ ಇದ್ದರೂ ಕೂಡ ವಿನಾ ಕಾರಣ ಅವರನ್ನು ಟೀಕೆ ಮಾಡುವ ನಂಬಿಕೆ ಇರುವ ರೀತಿಯಲ್ಲಿ ವರ್ತಿಸುತ್ತಾ ಇರುವವರಲ್ಲಿ ನಾನೂ ಒಬ್ಬ. ಈ ದೇಶದಲ್ಲಿ ದುಃಖಿಸೋದಕ್ಕೆ ಆ ಹೆಣ್ಣು ಮಗಳನ್ನು ಕರೆಸಿ ಈ ದೂರು ಹೇಳ್ಲುವರೆಗೂ ಹೋಯಿತಲ್ಲಾ ಎನ್ನುವುದೇ ನನ್ನ ಸಂಕಟ. ಈ ಹೆಣ್ಣು ಮಗಳಿಗೆ ಗೌರವ, ಪೂಜ್ಯ ಸ್ಥಾನ ಕೊಡಬೇಕಾದ ಜನ ನಾವು. ಅಂಥಾ ಸರ್ಕಾರವನ್ನು ನಾವು ರಚನೆ ಮಾಡಿಕೊಂಡಿದ್ದೇವೆ. ಅವರು ಇಂಥಾವರ ನ್ಯೊಳಗೊಂಡ ಉಪಸಮಿತಿಯನ್ನು ರಚನೆ ಮಾಡಿದರಲ್ಲಾ, ಇದಕ್ಕೆ ಹೊಣೆ ಯಾರು ? ಈ ಘಟನೆ ಸಿ. ಬಿ. ಐ. ವರೆಗೆ ತನಿಖೆಗೆ ಹೋಯಿತಲ್ಲಾ ಎನ್ನುವುದೇ ನನ್ನ ಚಿಂತೆ. ಇನ್ನು ನಾವು ರಾಜ್ಯದಲ್ಲಿ ಇರಬೇಕೇ ತಾಯಿ ! ತಾವು ಧೈರ್ಯದಿಂದ ಹೇಳಿ. ತಾವು ಈ ಘಟನೆ ಬಗ್ಗೆ ಕಣುಬಿಟ್ಟು ನೋಡುತ್ತಾ ಇದ್ದೀರಲ್ಲಾ, ಆ ಹೆಣ್ಣು ಮಗಳ ಮೇಲೆ ಇಂತಹ ಪಾಪದ ಕೆಲಸ ಮಾಡಿಸಿದ್ದೀರಲ್ಲಾ ಇದು ಸರಿಯೇ ತಾಯಿ ?

5-30 P.M.

ಈ ರಾಜ್ಯದಲ್ಲಿ ಏನು ಗತಿ ಆಗಿದೆ ! ಒಬ್ಬ ಹೆಣ್ಣು ಮಗಳು ತಿರುಗಾಡಬೇಕಾದರೆ ಅಲ್ಲೆನೂರು ಜನ ಗುಂಡಾಗಳು ಇದ್ದರು. ಹೆಣ್ಣು ಮಕ್ಕಳಿಗೆ ಏನು ಅನಾಚಾರ ಮಾಡುತ್ತಾರೆ ನೋಡಿ. ಹೆಣ್ಣು ಮಕ್ಕಳು ಬಸ್ಸಿನಲ್ಲಿ ತಿರುಗಾಡುವ ಹಾಗಿಲ್ಲ; ಹೆಣ್ಣುಮಕ್ಕಳಿಗೆ ರಕ್ಷಣೆಯಿಲ್ಲ ನೀವು ಅಧ್ಯಕ್ಷಣಿಯರಾಗಿರುವಾಗ ಈ ವ್ಯವಹಾರ ನಡೆಯುತ್ತಿದೆಯಲ್ಲ ಎಂದು ನನಗೆ ಸಂಟವಾಗುತ್ತದೆ, ತಮ್ಮ ಮುಖಾಂತರ ಮಾನ್ಯ ಮುಖ್ಯ ಮಂತ್ರಿಗಳನ್ನು ಪ್ರಾರ್ಥನೆ ಮಾಡುತ್ತೇನೆ. ರಾಜ್ಯದಲ್ಲಿ ಅನೇಕ ದುರ್‌ವ್ಯವಹಾರಗಳು ನಡೆದಿವೆ. ನಮ್ಮ ರಾಜ್ಯದಲ್ಲಿ ಶ್ರೀ ಕೆ. ಕೆ. ಮೂರ್ತಿಯವರು ಸರ್ಕಾರದ ಯಂತ್ರದ ಬೀಗದ ಕೈ ಇಟ್ಟುಕೊಂಡಿದ್ದಾರೆ ಎಂದು ಪ್ರತಿ ಗ್ರಾಮಾಂತರ ಜನ ಮಾತಲ್ಲಿ ನಾಡುವ ಪರಿಸ್ಥಿತಿ ಈಗ ಇದೆ. ಇದರ ಬಗ್ಗೆ ನ್ಯೂಲವಾಗಿ ನ್ಯೂಕ್ಷ್ಮದರ್ಶನ ಮಾಡಬೇಕು, ಒಂದೇ ಮಾತು, ಆ ಹೆಣ್ಣುಮಗಳು ದ ದ್ದನ್ನು ಇನಕೊಳ್ಳಲಿಲ್ಲ ಎಂದು ಯಾರಿಗೋ ದುಡ್ಡು ಕೊಟ್ಟ ರಸೀದಿ ತೆಗೆದುಕೊಂಡಿದ್ದಾರೆ ಎಂದು ಹೆಣ್ಣು ಮಗುವು ಹೇಳಿತು. ಯಾರಿಗೋ ದುಡ್ಡುಕೊಟ್ಟ ಅದರ ರಸೀದಿ ಪತ್ತೆದಿದ್ದೀರಿ ಎಂದರೆ ನನ್ನ ಮನಸ್ಸಿನಲ್ಲಿ ಭಯವಾಗುತ್ತದೆ. ಬರುವುದಿಲ್ಲ ಎಂದರೆ ನಾನು ದುಡ್ಡು ಕೊಡುವುದಿಲ್ಲ ಎಂದು ತಿಕ್ಕರಿಸತೆ ? ಇದು ಯಾವ ರೀತಿಯಲ್ಲೂ ಸೆಕ್ಷನ್ 420 ರ ಪ್ರಕಾರ ಕೇಸು ಆಗುವುದಿಲ್ಲ. ಯಾವುದೋ ಆಗುತ್ತದೆ ಬೇಕು ಅಂತ ಸೆಕ್ಷನ್ 420 ರ ಪ್ರಕಾರ ಕೇಸು ಮಾಡಿದ್ದಾರೆ. ಈ ವ್ಯವಹಾರದಲ್ಲಿ ಯಾರು 420 ಎಂದು ನಾವು ನಿರ್ಣಯ ಮಾಡಬೇಕು ? ವಿದ್ಯಾ ಮಂತ್ರಿಗಳು ಅಧ್ಯಕ್ಷರಾಗಿದ್ದರೆ ಈ ಅವ್ಯವಹಾರ ನಡೆಯುತ್ತಾ ಇರಲಿಲ್ಲ. ಹೆಣ್ಣುಮಕ್ಕಳ ರಕ್ಷಣೆ ಸರ್ಕಾರದ ಆಶ್ರಯದಲ್ಲಿ ಆಗುವುದಿಲ್ಲ ಎಂದು ಪ್ರಾಮುಖ್ಯವಾಗಿ ಅನೇಕ ಮಿತ್ರರು ಪ್ರಸ್ತಾಪ ಮಾಡುತ್ತಿದ್ದಾರೆ. ಸಿ.ಬಿ.ಐ. ವಿಚಾರಣೆ ಮಾಡುತ್ತಾರೆ, ರಾಜ್ಯದ ಸಿ.ಐ.ಡಿ. ಇಲಾಖೆಯವರು ವಿಚಾರಣೆ ಮಾಡುತ್ತಾರೆಂದರೆ ಇದರೊಳಗೆ ಏನೋ ಇದೆಯೆಂದು ಗೊತ್ತಾಗುತ್ತದೆ. ತಾವು ಇದರಲ್ಲಿ ನ್ಯಾಯ ದೊರಕಿಸಿಕೊಡಬೇಕು ಎಂದು ಸ್ಪಷ್ಟವಾಗಿ ಹೇಳುತ್ತೇನೆ. ಸಿ.ಬಿ.ಐ. ರಿಪೋರ್ಟನ್ನು ಮಾನ್ಯ ಮುಖ್ಯ ಮಂತ್ರಿಗಳು ಸಭೆಯ ಮುಂದೆ ಇಡಬೇಕು ಎಂದು ತಮ್ಮ ಮುಖಾಂತರ ಪ್ರಾರ್ಥಿಸಿ ಎರಡು ಮಾತು ಹೇಳಿ ಹೆಣ್ಣು ಮಕ್ಕಳಿಗೆ ರಾಜ್ಯದಲ್ಲಿ ರಕ್ಷಣೆ ದೊರೆಯಲಿ ಎಂದು ಭಗವಂತನನ್ನು ಪ್ರಾರ್ಥಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಅಜೀಜ್‌ಸೇಟ್ (ಕಾರ್ಮಿಕ ಶಾಖೆಯ ಮಂತ್ರಿಗಳು).—ಬಹಳ ದಿರ್ಘವಾದ ವಿಷಯಗಳನ್ನು ಶ್ರೀಮಾನ್ ವಾಟಾಳ್‌ನಾಗರಾಜ್, ವಿರೋಧಪಕ್ಷದ ನಾಯಕರಾದ ಶ್ರೀಮಾನ್ ದೇವೇಗೌಡರು ಹಾಗೂ ಕಣ್ಣೀರುಹಾಕಿ ಮಾತನಾಡಿದಂತ ಶ್ರೀಮಾನ್ ಪುಟ್ಟಸ್ವಾಮಯ್ಯನವರು

ಹೇಳಿದ್ದು ನೋಡಿ ನನಗೆ ಆಶ್ಚರ್ಯವಾಗುತ್ತದೆ. ನಾವು ಯಾವ ಮಟ್ಟದಲ್ಲಿ ಬಂದಿದ್ದೇವೆ. ಇಲ್ಲಿ ಕುಳಿತುಕೊಂಡು ಯಾವ ವಿಷಯಗಳನ್ನು ಚರ್ಚೆಮಾಡಬೇಕು, ಯಾವರೀತಿ ಯೋಚನೆಮಾಡಬೇಕು ಎಂದು ತಿಳಿದುಕೊಂಡಿರಬೇಕು *** ನಾನು ಅವರಿಗೆ ಹೇಳುತ್ತಾ ಇದ್ದದ್ದು ನಾವು ಚರ್ಚೆ ಮಾಡುವುದಕ್ಕೆ ಕುಳಿತಿರುವುದು ಒಬ್ಬ ಆರ್ಟಿಸ್ಟ್ ವಿಷಯವೆಂದು ನೀವು ಮನಸ್ಸಿನಲ್ಲಿಟ್ಟುಕೊಳ್ಳಬೇಕು. ನನಗೆ ಆರ್ಟಿಸ್ಟ್ ಬಗ್ಗೆ ಅಪಾರವಾದ ಗೌರವ ಇದೆ. ಅವರು ಪ್ರೊಫೆಷನಲ್ ಆರ್ಟಿಸ್ಟ್. She is an income-tax payer. She can be brought on contract to any State for Drama or dance. ಈ ಒಂದು ವಿಷಯಕ್ಕೆ ಇಷ್ಟು ಹಣ, ಇಷ್ಟು ವೇಳೆ ನಾವು ತೆಗೆದು ಕೊಂಡದ್ದು ನ್ಯಾಯವೇ ಎಂದು ಹೇಳುವುದಕ್ಕೆ ಪ್ರಯತ್ನಪಡ್ತೇನೆ. ಇನ್ನು ಯಾವ ಅಗೌರವವಾದ ವಿಷಯವನ್ನೂ ನಾನು ಮಾತನಾಡುತ್ತಾ ಇಲ್ಲ.

SRI H. D. DEVEGOWDA.—I wish to raise a point of order. ನಿಯಮಾವಳಿ ಸೂಚನೆಯನ್ನು ಈ ಸಭೆಯ ನಿಯಮಾವಳಿಯ ಪ್ರಕಾರ ತಾವು ಚರ್ಚೆಮಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ಮಂತ್ರಿಗಳು ತಮ್ಮ ಅಧಿಕಾರವನ್ನು ಪ್ರಶ್ನೆಮಾಡುತ್ತಾ ಇದ್ದಾರೆ ಈ ಸಭೆ ಕಾಲವನ್ನು ತೆಗೆದು ಕೊಂಡಿರತಕ್ಕದ್ದು ಉಚಿತವಲ್ಲವೆಂದು ಹೇಳುತ್ತಿದ್ದಾರೆ. ತಾವು ಒಂದು ವಿಷಯವನ್ನು ಈ ಸಭೆಯಲ್ಲಿ ಚರ್ಚೆಮಾಡುವುದಕ್ಕೆ ಈ ಸಭೆಯ ನಿಯಮಾವಳಿ ಪ್ರಕಾರ ಅನುಮತಿಯನ್ನು ಕೊಟ್ಟಿದ್ದೀರಿ. ಅದನ್ನು ಮೂಲತಃ ಪ್ರಶ್ನೆ ಮಾಡುತ್ತಿದ್ದಾರೆ ಇದು ಕ್ರಮವೇ ಎಂದು ತಿಳಿಸಬೇಕು.

ಶ್ರೀ ಅಜೀಜ್‌ಸೇಟ್.—ತಾವು ರೂಲಿಂಗ್ ಕೊಡುವುದಕ್ಕೆ ಮೊದಲು ಅವರ ಪಾಯಿಂಟ್ ಆಫ್ ಆರ್ಡರ್‌ನ್ನು ವಿರೋಧಿಸುತ್ತಾ ತಮ್ಮ ಗಮನಕ್ಕೆ ಒಂದು ವಿಷಯ ತರುತ್ತೇನೆ. ನಾನು ಹೇಳಿದ್ದರಲ್ಲಿ ನಿಜಾಂಶ ಇದೆಯೇ ಮತ್ತು ಸತ್ಯ ಇದೆಯೇ ಎಂದು ನಾವು ತೂಕಮಾಡಿ ನೋಡಬೇಕು. ತಾವು ಇದನ್ನು ರೂಲ್ 59ರ ಪ್ರಕಾರ ಅಡ್ಮಿಟ್ ಮಾಡಿರುವುದು ಈ ವಿಷಯ ಏನೆಂದರೆ: to raise a discussion regarding irregularites that occurred in regard to the cultural activities as a part of the Dasara Celebrations during this year Dasara. ತಮ್ಮಬಗ್ಗೆ ನನಗೆ ಅಪಾರವಾದ ಗೌರವ ಇದೆ. ತಾವು ಪ್ರತಿಯೊಂದು ಪರಿಶೀಲನೆ ಮಾಡಿ ನೋಡಿ. ಅದು ತಮ್ಮ ಒಂದು ಸಬ್ಜೆಕ್ಟ್‌ಗೆ ಒಳಪಟ್ಟದ್ದು. ಅನೇಕರೀತಿ ಸದಸ್ಯರು ಎಷ್ಟು ನಿಮಿಷ ಎಷ್ಟು ಗಂಟೆ ಮಾತನಾಡಿದ್ದಾರೆ. ಬಾಕಿ ಮಾತುಗಳು ಎಷ್ಟು ಬಂದಿವೆ. ಏಂಬುದನ್ನೂ ಕೂಡ ತಾವು ಸ್ವಲ್ಪ ನೋಡಬೇಕು.

ಶ್ರೀ ವಾಟಾಳ್ ನಾಗರಾಜ್.—ಇದು ಅಧ್ಯಕ್ಷರಿಗೆ ಬಿಟ್ಟದ್ದು.

ಶ್ರೀ ಅಜೀಜ್‌ಸೇಟ್.—ಅದನ್ನು ಅವರಿಗೆ ತಾವು ಬಿಟ್ಟಿದ್ದೀರಿ, ನಾವೂ ಬಿಟ್ಟಿದ್ದೇವೆ. ವಿರೋಧ ಪಕ್ಷದವರಿಗೆ ಹೇಳಲು ಎಷ್ಟು ಅಧಿಕಾರವಿದೆಯೋ ನಮಗೂ ಹೇಳುವುದಕ್ಕೆ ಅಷ್ಟೇ ಅಧಿಕಾರವಿದೆ. ತಾವು ಹೇಳಿದ್ದು ಕೇಳಿದ್ದೇವೆ, ನಾವು ಹೇಳುವುದನ್ನು ತಾವು ಸಾವಕಾಶವಾಗಿ ಕೇಳಿ.

ಶ್ರೀ ಎಂ. ಎಸ್. ಕೃಷ್ಣನ್.—ನಾನೂ ಅದೇ ಪ್ರಶ್ನೆ ಎತ್ತಿದ್ದೆ. These irregularities are connected with cultural activities.

ಅಧ್ಯಕ್ಷರು.—ಅಪ್ಪಣೆ ಕೊಟ್ಟಿರುವುದು ನಿಜ. ಚರ್ಚೆ ಆಗಿರುವುದು ಸರಿ. ಮಾನ್ಯಮಂತ್ರಿಗಳು ಇದಕ್ಕೆ ಸಂಬಂಧಪಟ್ಟ ಉತ್ತರ ಕೊಡಬೇಕು.

Sri AZEEZ SAIT.—The Government decided this year to celebrate the annual Dasara Celebrations in a befitting manner. In view of the withdrawal of the Princely privileges, it was felt that the Dasara Celebrations should become a peoples' festival and that the accent should be on the promotion of sporting activities, commercial activities and Cultural activities. Two main committees were set up. The Central Committee under the Chairmanship of the Chief Secretary to Government and the Organising Committee under the Chairmanship of the Divisional Commissioner, Mysore. Subsequently, it was decided that the Minister for Transport and

*** Matter expunged as ordered by the Chair.

(SRI AZEEZ SAIT)

Tourism may take over the Chairmanship of the Organising Committee. The Organising Committee appointed several sub-committees to attend to specific arrangements of the Dasara Celebrations. One of the sub-committees created was the Cultural Sub-Committee and the Organising Committee appointed Shri K. K. Murthy as Chairman of this Committee. Last year the Chairman of the Cultural Sub-Committee was Shri R. K. Narayan. It will thus be seen that it was not always the practice that the Chairman of the Dasara Exhibition Committee would automatically be the Chairman of the Cultural Committee. As the Cultural Committee was organising both a dance and musical festival as well as a film festival, it was felt that Shri K. K. Murthy who is the Managing Director of the Mysore State Film Industries Development Corporation would be suitable for the assignment.

The Cultural Committee organised an ambitious and attractive programme for the entertainment of the visitors to the Dasara Celebrations. Eminent artists, dancers and musicians, both from Mysore State and from other States of All India repute were invited to perform. The total number of programmes fixed by the Committee was 18 with 27 Artistes. This was a substantial increase over last year's programmes which were 8, with 11 artistes. These programmes received wide spread appreciation and applause. The total receipts on sale of tickets this year was Rs. 1,26,000 as against Rs. 50,000 last year.

From the variety of entertainment provided, the number of persons who attended and the collections it would not be appropriate to reach the conclusion that there was mis-management in the conduct of the Cultural Celebrations. Government has received no complaint regarding any alleged mis-management in the case of Kumari Hema Malini. However, in the case of Kumari Jayalalitha a major problem arose because of her lastminute cancellation of an accepted engagement. The details of the case of Kumari Jayalalitha are as follows :—

The only unfortunate incident which occurred was the case of Kumari Jayalalitha which I feel has been unduly magnified and taken out of all proportion. Amongst the distinguished artists invited to preform, the Cultural and Film Festival Sub-Committee under the Chairmanship of Shri K. K. Murthy had approached Kumari Jayalalitha to give a dance recital. She accepted the engagement originally for the 14th of October 1972 and a demand draft for Rs. 4,000 was sent to her in her name. She returned this demand draft and requested Shri Murthy to draw the draft in the name of Natya Kalanikethan. In her letter dated 23rd September she cancelled the programme without specifying any grounds and

sent back the draft for Rs. 4,000. At a request made by the Sub-Committee, Kumari Jayalalitha considered and agreed to perform on 20th October 1972. She askde for an advance of Rs. 5,500 stating that it should be sent in cash to her. Accordingly this amount was sent, but the receipt was not given by Kumari Jayalalitha but by her aunt Smt. Jayalakshmi Kannan. In her letter of 9th October, while confirming the programme of 20th October she made no mention of the advance that she had been given but stipulated that Rs. 3,000 by way of drawing a demand draft be drawn in her name. All arrangements were made for holding her performance on 20th October. Considerable expenditure was incurred by the Organisers for the purpose and wide publicity was given. On the 19th of October, the day previous to the performance, a letter was received from Kumari Jayalalitha dated 15th October cancelling her programme on the ground that threatening statements had been made by certain persons against her and that she was afraid to attend.

In these circumstances, the organizers were placed in a most embarrassing and awkward situation as they had made all arrangements for the performance. It was also learnt that in spite of expressing fears about her safety, Kumari Jayalalitha came to Mysore actually on the night of 20th October along with her party for a film shooting programme at the Premier Studios, Mysore and that she was staying in the Hotel Metropole. The amount of Rs. 5,500 which had been given as advance had also not been returned. As the Vice-Chairman of the Committee was responsible for the safe custody of public funds and as the circumstances indicated that the artist had not only defaulted in her contractual liability thereby causing grave loss to the organizers but she had also not returned the amount paid, the Chairman lodged a complaint with the Inspector of Police, C. Division, Mysore City and gave a statement to the effect that Kumari Jayalalitha had not only broken her contract but had also not returned the advance of Rs. 5,500 and was cheating the organisers on receipt of the complaint, the police registered a case in Crime No. 525/72, under Section 420 of the I.P.C.

In order to investigate the complaint and to obtain the statement of Kumari Jayalalitha, Police Officers visited the Premier Studios where Jayalalitha was engaged in film shooting. They requested her to come over to the Police Station to give her statement. Accordingly Kumari Jayalalitha accompanied by the Producer Shri B. R. Panthalu and the Studio Owner Shri Basavarajaiah came over to the Police Station in her own vehicle. After going through the complaint against her, she gave a statement that she would send her written statement through her lawyer and she left the Police Station after a few minutes. During her visit to the Police Station which was in the presence of her Producer and Studio Owner, she was treated with courtesy.

(SRI AZEEZ SAIT)

On the evening of 21st a crowd of about 20 persons congregated near the Hotel Metropole at about 1530 hours demonstrating against Kumari Jayalalitha's cancellation of her programme. On receipt of a phone message, the Police Inspector, C. Division and the Assistant Superintendent of Police with some staff rushed to the hotel and drove away the demonstrators. On the request of Kumari Jayalalitha a Police Constable was deputed to escort her to the studio and a picket of one head-constable and two constables were posted at the hotel to prevent similar untoward incidents.

On the 22nd of October at about 1100 hours the Police Inspector, V. V. Puram Police Station received a phone message from the Premier Studios that some disturbances were taking place in the studios. He immediately sent three police constables and subsequently also went personally to the spot. About 30 persons stated to belong to the Kannada Chaluvaligars were staging demonstration in the studio demanding an apology from Kumari Jayalalitha for having made certain statements to the press that she was not a Kannadiga. The police suceeded in bringing the situation under control and the demonstrators were dispersed.

The Criminal case filed by the Chairman of the Cultural Sub-Committee is being investigated by the Police. In the meanwhile there has been an exchange of lawyers' notices between Sri K. M. Murthy and Kumari Jayalalitha. The matter is now being examined from the legal point of view. I hope it would be satisfactorily and amicably settled. It is unfortunate that this incident has received adverse publicity. There is little doubt that the organizers were put to very grave inconvenience by the artiste. Her fears about her obstruction of her programme do not seem to be justified since there were no such obstruction in the case of any other outside artiste many of whom performed during the celebrations.

It has been stated that the name of the Chief Minister was used by the Chairman of the Cultural Sub-Committee. I would like to state that at no stage was the Chief Minister associated with this matter and he learnt about it only after these occurrences had taken place. Further more, in a letter dated 7th November 1972 which the Advocate of Kumari Jayalalitha addressed to Shri K. K. Murthy it is stated very clearly as follows :—

> " ..... My client has not involved the Hon'ble Chief Minister of Mysore in any of her press statements. My client has got a copy of the statements given in writing to the press at the request of the press .....".

Kumari Jayalalitha has written a letter to the Prime Minister on 24th October 1972. In it she stated:

> "About a week prior to that date, I had reliably learnt that there was public agitation against my programme in Mysore as it was felt that I was from a different State and that there would be a demonstration, possibly accompanied by violence, against me. I am a Srirangam Iyengar whose mother tongue is Tamil. Having been born in Mysore, I had often been mistaken for a Kannadiga. Therefore in some Tamil papers I clarified the fact that alothough I was born in Mysore I belonged to a Srirangam Iyengar family and was a Tamilian."

I am most surprised about this particular paragraph which I read before you. From the commencement to the end of the Dasara Festival we had no agitation in Mysore and it is abundantly proved. Although we had invited many outside artistes, there was not a single agitation. On the contrary we had overwhelming crowds to see and witness dramas, dances and music performances. The outside artistes were in quite a good number. With this we can understand the background I have given. It is a very simple matter. A small thing has been made so big and given undue publicity to create a sort of commotion. We can see the motive of this cunning international. This letter written by Kumari Jayalalitha to the Prime Minister must have been distributed to many of the Members. Further, how much wide publicity has been given by the Artiste herself. For all that has been stated by our friends and the Leader of the Opposition, the material must have been furnished by Kumari Jayalalitha. I am confident to say on my own knowledge that probably Kumari Jayalalitha or her representative must have briefed the Opposition members with certain things and on the basis of that, our friends have spoken.

This is factual statement which I have made about the matter. She herself has said that Kannada Chaluvaligars have created trouble for her. It is absolutely wrong. When she said 'I am not a Kannadiga', naturally, as stated by Mr. Vatal Nagaraj, once you take money and you do not give your performance and fulfil the contract—is this 420 or anything else, as a lawyer you can understand. Any two lawyers do not agree and I cannot argue with you because I am not a lawyer.

Sri KAGODU THIMMAPPA.—You can get the opinion of the Law Department.

Sri M. S. KRISHNAN.—Has she said that she has not been ill-treated by the police? The allegation is that she is taken to the police station in a police van when she was in the make-up.

Sri AZEEZ SAIT.—She has tried to play a sort of very unhappy incident for reasons best known to her. If she wanted to break the contract, then there was no necessity for her to go to Mysore on that particular date. You can understand that she had something behind her mind. If Mr. K. K. Murthy, Chairman of the Cultural Committee had given that money, he is answerable to the Government and when artists do not come and money had been given, I do not think there is anything wrong on the part of Sri K. K. Murthy to have lodged a complaint with the police. The police after receiving the complaint, naturally had to act and they have shown most decent and gentlemanly behaviour and so along with the producer, promoter and proprietor of the studio, they have taken them to the police station. What else do you want?

†ಶ್ರೀ ಎಚ್. ಡಿ. ದೇವೇಗೌಡ.—ಮಂತ್ರಿಗಳು ಜೈಲಿನಲ್ಲಿದ್ದ ಆಫೀಸರ್ ಬಗ್ಗೆ ಅಪ್ಪಣೆ ಕೊಟ್ಟರು. ನಾವು ಹೆಲವಾರು ಇಷ್ಯೂಸ್ ರೈಸ್ ಮಾಡಿದ್ದೇವೆ. ನಮಗೆ ಎರಡೂವರೆ ಗಂಟೆ ಅವಕಾಶವಿದೆ, ಇದಕ್ಕೆ ಅಪ್ಪಣೆ ಕೇಳಿದ್ದೆ. ಪಬ್ಲಿಕ್ ಹಣ 5500 ರೂಪಾಯಿ ಮೋಸಮಾಡಲು ಬಡದಂತೆ ಕ್ರಮ ತೆಗೆದುಕೊಂಡಿದೆಯೆಂದು ಹೇಳಿರುವುದು ಒಳ್ಳೆಯ ಮಾತು. ಆದರೆ ಅದಕ್ಕೆ 9750 ರೂಪಾಯಿ ಖರ್ಚುಮಾಡಿದ್ದಾರೆ. ಇದು ಯಾರ ಮನೆ ಹಣ? ಇದು ಸಾರ್ವಜನಿಕರ ಹಣವೇ ಅಲ್ಲವೇ? Total receipts on sale of tickets this year ಒಂದು ಲಕ್ಷ 26 ಸಾವಿರ ರೂಪಾಯಿ ಬಂದಿದೆಯೆಂದು ಹೇಳಿದರು. ಯಾವ ಯಾವ ಬಾಬಿಗೆ ಎಷ್ಟೆಷ್ಟು ಹಣ ಖರ್ಚುಮಾಡಿದ್ದೀರಿ ಅದರ ಬಗ್ಗೆ ವಿವರಣೆ ಕೊಟ್ಟಿಲ್ಲ. ಕನ್ನಡ ಆರ್ಟಿಸ್ಟುಗಳಿಗಾಗಿ ಎಷ್ಟು ಹಣ ಕೊಟ್ಟಿದ್ದೀರಿ? ಅವರನ್ನು ಫಿಕ್ಸ್ ಮಾಡುವಾಗ ಶ್ರೀನಿವಾಸಯ್ಯಂಗಾರರು, ನರಸಿಂಹಮೂರ್ತಿ ಮುಂತಾದವರಿಗೆ ಬರೆದ ಪತ್ರಗಳ ಫೋಟೋಸ್ಟಾಟ್ ಕಾಪಿಗಳನ್ನು ಹಾಜರು ಮಾಡಬಹುದು. ಇದರ ಬಗ್ಗೆ ಪರಿಶೀಲನೆಯಾಗುತ್ತಿದೆ. ನಾವು ಈ ಸಭೆಯ ಕಾಲವನ್ನು ವ್ಯರ್ಥವಾಗಿ ಕಳೆಯುತ್ತಿದ್ದೇವೆಂದು ಅವರು ಸಮರ್ಥನೆ ಮಾಡುವುದ ಕ್ಕಾಗುವುದಿಲ್ಲ. ಶ್ರೀರಂಗಂ ಐಯಂಗಾರರ ಮನೆಯಲ್ಲಾ ಹುಟ್ಟಿದ್ದೇನೆ, ಬೆಳೆದಿದ್ದೇನೆ ಎಂದು ಅವರು ಬರೆದುದನ್ನು ಓದಿ ಸಮರ್ಥನೆ ಮಾಡಿದರು. ಆ ರೀತಿ ಬೇಕಾದರೆ ನಾನು ಬೇಕಾದಷ್ಟು ಓದುತ್ತೇನೆ. He threatened he would see that film shooting would not take place, he being a close friend of the Chief Minister of Mysore Mr. Devaraj Urs. ಜಯಲಲಿತ ಅವರ ರಿಪ್ರಸೆಂಟೇಟಿವ್ ವಿಚಾರ ಹೇಳಿದರು. ನನಗೆ ಫಿಲಂ ಖಯಾಲಿ ಇಲ್ಲ; ಫಿಲಂ ಆರ್ಟಿಸ್ಟುಗಳ ಸಂಪರ್ಕವಿಲ್ಲ. ನೊಂದ ಹೃದಯದಿಂದ ನಾನು ವಿಚಾರಗಳನ್ನು ಹೇಳುತ್ತಿದ್ದೇನೆ. ದೇಶದಲ್ಲಿ ಪ್ರಧಾನಿಯವರು ಮಹಿಳೆಯಾಗಿರುವಾಗ ಇಂಥ ಘಟನೆ ನಡೆದಿದೆ. ಇದರ ಬಗ್ಗೆ ಪೋಲೀಸ್ ಕೇಸ್ ಇಲ್ಲವೆಂದು ಹೇಳಿ ಅದನ್ನು ಸಮರ್ಥಿಸಲು ಪ್ರಯತ್ನ ನಡೆದಿದೆ. ಈ ವಿಚಾರದಲ್ಲಿ ನಿಷ್ಪಕ್ಷಪಾತವಾದ ವಿಚಾರಣೆಯಾಗಲಿ, ಸಿ. ಐ. ಡಿ. ಗಳಿಂದ ಪರಿಶೀಲನೆಯಾಗಿ ಅವರ ವರದಿ ತರಿಸಿ. ಆಗ ನಾವು ಹೇಳಿರುವುದು ರುಜುವಾತಾಗದಿದ್ದರೆ ನಾನು ಈ ಸ್ಥಾನದಲ್ಲಿ ಕೂರುವುದಿಲ್ಲ. ಇದೊಂದೇ ಇಷ್ಯೂ ಮೇಲೆ ಈ ರೀತಿ ಹೇಳುತ್ತಿದ್ದೇನೆ. ಕೀಳು ಮಟ್ಟದ ಪ್ರವೃತ್ತಿ ಬೇಡ. ನಾನು ಹಲವಾರು ವಿಷಯಗಳನ್ನು ಪ್ರಸ್ತಾಪಮಾಡಿದ್ದೇನೆ. ಅದಕ್ಕೆ ಮಂತ್ರಿಗಳಿಂದ ಉತ್ತರ ಕೊಡಿಸಬೇಕು. ಕೇವಲ ಯಾರಿಗೋ ಸಹಾಯ ಮಾಡಲು ಸಮರ್ಥನೆ ಮಾಡಿಕೊಳ್ಳುವುದು ಉಚಿತವಲ್ಲ, ಯೋಗ್ಯವಲ್ಲ. ಇದಕ್ಕೆ ಸಂಬಂಧಪಟ್ಟ ಎಲ್ಲಾ ವಿವರಗಳನ್ನೂ ಸಭೆಯ ಮುಂದಿಡಬೇಕು. 9750 ರೂಪಾಯಿ ಖರ್ಚಾಗುವುದಕ್ಕೆ ಕಾರಣವೇನು? ಈ ಹಣ ಯಾವ ಯಾವ ಬಾಬಿಗೆ ಖರ್ಚಾಗಿದೆ? ಇದು ಸಾರ್ವಜನಿಕರ ಹಣ, 5500 ರೂಪಾಯಿ ಮುಂಗಡ ಕೊಟ್ಟಿದ್ದಾರೆ, ಹಿಂದೆ ಕಾರ್ಯಕ್ರಮ ಮುಗಿದ ಮೇಲೆ ಸಂಭಾವನೆ ಕೊಡುತ್ತಿದ್ದರು, ಅದುವರೆಗೆ ಕೊಡುತ್ತಿರಲಿಲ್ಲ. ಈ ದಿವಸ ಮುಂಚೆಯೇ ಕೊಟ್ಟಿದ್ದಾರೆ. ಎಷ್ಟು ಹಣ ಮುಂಚಿತವಾಗಿ ಡ್ರಾ ಮಾಡಲು ಅವಕಾಶವಿದೆ; ಧರ್ಮವೀರರ ಕಾಲದಲ್ಲಿ ಚೇರ್ಮನ್ ಆರಿಸಿದ್ದು ನನಗೆ ಗೊತ್ತಿದೆ. ಅದರ ಬಗ್ಗೆ ಹೆಚ್ಚು ಪ್ರಸ್ತಾಪ ಮಾಡುವುದಿಲ್ಲ. ಇದಕ್ಕೆ ಹಿಂದೆ ದನರಾ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಸಂಬಂಧಪಟ್ಟ ಹಾಗೆ ಸಬ್ ಕಮಿಟಿ ಥೇರ್ಮನ್ ಮಾಡಿರುವ ನಿದರ್ಶನ ಇದೆಯೇ; ಇದನ್ನು ಸಮರ್ಥನೆ ಮಾಡಿ. ಇದಕ್ಕೆಲ್ಲಾ ಉತ್ತರ ಕೊಡಬೇಕು. ಹಾರಿಕೆ ಉತ್ತರ ಒಪ್ಪುವುದಕ್ಕೆ ನಾನು ತಯಾರಿಲ್ಲ. ದಯಮಾಡಿ ಸಂಬಂಧಪಟ್ಟ ವಿವರಗಳನ್ನು ಮತ್ತು ಬ್ಯಾಲೆನ್ಸ್ ಷೀಟನ್ನು ಸಭೆಯ ಮುಂದಿಡಬೇಕು. ಡಿವಿಜನರ್

ಕಮೀಷನರು ಅಧ್ಯಕ್ಷರಾಗುತ್ತಿದ್ದುದನ್ನು ತಪ್ಪಿಸಿ ಒಬ್ಬ ಕಳಂಕವಿರುವ ಅಧಿಕಾರಿ ಹಾಕಿದಿರಿ. ಡಿವಿಜನರ್ ಕಮೀಷನರಿಗೆ ಈ ಕೆಲಸ ನಡೆಸುವ ಯೋಗ್ಯತೆ ಇರಲಿಲ್ಲವೇ? ಏಕೆ ಹೀಗೆ ಮಾಡಿದರು ಎಂಬುದನ್ನು ಸಮರ್ಥನೆ ಮಾಡುವಾಗ ಎಲ್ಲಾ ವಿವರಗಳನ್ನೂ ಸಭೆಯ ಮುಂದಿಡಬೇಕು. ಇಷ್ಟು ಸುಲಭವಾಗಿ ಹಾರಿಕೊಳ್ಳುವ ಪ್ರಯತ್ನಕ್ಕೆ ಅವಕಾಶ ಕೊಡುವುದಕ್ಕೆ ಸಾಧ್ಯವಿಲ್ಲ.

6 P.M.

Sri AZEEZ SAIT.—If the Hon'ble Member wants to attack, I am not here to pocket it so lightly. We shall place on the Table of the House every item of expenditure.

Sri H. D. DEVEGOWDA.—All that amount must be paid back.

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರೇ.....

ಅಧ್ಯಕ್ಷರು.—ಈಗ ಮಾನ್ಯ ಸದಸ್ಯರುಗಳು ಕೊಟ್ಟಿರತಕ್ಕ ನೋಟೀಸ್ ಎರಡೂವರೆ ಗಂಟೆಗಳ ಕಾಲ ಡಿಸ್‌ಕಸ್ ಮಾಡತಕ್ಕ ಒಂದು ವೋಷನ್ನಿಗೆ ಸಂಬಂಧಪಟ್ಟ ವಿಷಯವಾಗಿದೆ. ಆದರೆ ಈ ವಿಚಾರದಲ್ಲಿ ಒಬ್ಬೊಬ್ಬ ಮಾನ್ಯ ಸದಸ್ಯರಿಗೂ ಎರಡೆರಡಾವರ್ತಿ ಮಾತನಾಡುವುದಕ್ಕೆ ಅವಕಾಶ ಉಂಟೇ! ಆ ರೀತಿ ಅವಕಾಶವಿಲ್ಲ ಎಂಬುದು ತಪ್ಪುಗೆಲ್ಲರಿಗೂ ಗೊತ್ತಿದೆ.....

ಶ್ರೀ ಎಚ್.ಡಿ. ದೇವೇಗೌಡ.—ನಾವು ವಿವರಣೆ ಕೊಡಿ ಎಂದರೆ ಏಕೆ ಮುಂತ್ರಿಗಳು ಕೊಡುತ್ತಿಲ್ಲ!

Sri AZEEZ SAIT.—The Hon'ble Member cannot say like that. If he says that all those who are sitting here are *papis* then we have a right to say that they are *Harischandras*. Under Rule 59 the Hon'ble Member has sought to raise a discussion regarding the irregularities that occurred in regard to the cultural activities connected with the Dasara Celebrations. Prior to that my office has received a notice today morning under Rule 59 regarding Jayalalitha. During discussion they have brought in the name of Sri K. K. Murthy and other things. Am I to carry on my back bundles relating to all these matters? I am going to place each and every detail relating to the Dasara Celebrations on the Table of the House.

ಶ್ರೀ ವಾಟಾಳ್ ನಾಗರಾಜ್.—ಇಲ್ಲಿ ಮುಖ್ಯವಾದ ಒಂದು ಪ್ರಶ್ನೆ ಏನಿದೆ ಎಂದರೆ.....

ಅಧ್ಯಕ್ಷರು.—ಮಾನ್ಯ ಸದಸ್ಯರು ದಯವಾಡಿ ಕುಳಿತುಕೊಳ್ಳಬೇಕು.....

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಮಂತ್ರಿಗಳು ತರೆಮರೆಯಲ್ಲಿ ಕೆ. ಕೆ. ಮೂರ್ತಿ ಅವರಿಗೆ ರಕ್ಷಣೆ ಕೊಡುವುದಕ್ಕೆ ಹೊರಟಿದ್ದಾರೆ. ಅದು ಏಕೆ ಆ ಸ್ಟೂಡಿಯೋದಲ್ಲಿ ಗೂಂಡಾಗಳು ನುಗ್ಗಿದ ಕಾಲಕ್ಕೆ ಆ ಸ್ಥಳಕ್ಕೆ ಪೋಲೀಸಿನವರೇಕೆ ಬರಲ್ಲಿಲ್ಲ? ಇಂಥ ವಿಷಯಗಳೆನ್ನೆಲ್ಲ ತೆರೆಮರೆಯಲ್ಲಿ ಮುಚ್ಚುವದಕ್ಕೆ ಸಾಧ್ಯವಿಲ್ಲ. ಸರ್ಕಾರಕ್ಕೆ ಅಂಥ ಧಿಮ್ಮತನವಿದ್ದರೆ ಶ್ರೀಮಾನ್ ದೇವೇಗೌಡರು ಹೇಳಿದ ಹಾಗೆ ಒಂದು ಜುಡಿಷಿಯರ್ ಎನ್‌ಕ್ವೈರಿಯನ್ನು ನೇಮಕ ಮಾಡಿ ಎಂದು ಒತ್ತಾಯ ಮಾಡುತ್ತೇನೆ. ಇಲ್ಲಿ ಇವರು ಕೋತಿ ಮೊಸರನ್ನು ತಿಂದು ಕೈ ಅನ್ನು ಮೇಕೆ ಬಾಯಿಗೆ ಒರೆಸಿದಂತೆ ಕಲಸ ಮಾಡುತ್ತಿದ್ದಾರೆ. ಇವರು ಕೊಡತಕ್ಕ ಹೇಳಿಕೆಗಳೇನಿವೆ ಎಲ್ಲಾ ಸತ್ಯಕ್ಕೆ ದೂರವಾದವುಗಳು.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಸಚಿವರು ಮಾತನಾಡತಕ್ಕ ಕಾಲದಲ್ಲಿ ಎರಡು ವಿಷಯುಗಳ ಬಗ್ಗೆ ಸಂಶಯ ಬರುವಂತೆ ಮಾತನಾಡಿದ್ದಾರೆ. ಅದು ಯಾವುದೆಂದರೆ ಆ ಜಯಲಲಿತ ಎನ್ನತಕ್ಕವರು ತಮಿಳರು, ಅವರು ಒಂದು ಹೇಳಿಕೆಯನ್ನು ತಮಿಳಿನಿಲ್ಲಿ ಕೊಟ್ಟಿದ್ದಾರೆ. ಅವರು ಶ್ರೀರಂಗಂ ಅಯ್ಯಂಗಾರ್ ಅವರ ಮಗಳು, ಇಲ್ಲವೇ ಅವರ ಮಗನ ಮಗಳು ಎಂದು ಹೇಳಿದ್ದಾರೆ. ಆದರೆ ಆ ಜಯಲಲಿತ ಎನ್ನತಕ್ಕವರು ಕನ್ನಡಿಗರ ಬಗ್ಗೆಯಾಗಲಿ ಅಥವಾ ಮೈಸೂರಿನವರ ಬಗ್ಗೆ ಆಗಲಿ ನನಗೆ ಯಾವ ಭಿನ್ನಾಭಿಪ್ರಾಯವೂ ಇಲ್ಲ ಎಂಬುದಾಗಿ ಹೇಳಿರುವಾಗ ಇಲ್ಲ ಇವರು ಅವರು ತಮಿಳರು—ನಾವು ಕನ್ನಡಿಗರು ಎಂಬ ಒಂದು ಭಿನ್ನಾಭಿಪ್ರಾಯವನ್ನು ಹುಟ್ಟಿಸುವುದಕ್ಕೆ ಹೊರಟ್ಟಿದ್ದಾರೆ. ಅದು ಸರಿಯಾದ್ದಲ್ಲ. ಆದರೆ ಇಲ್ಲಿ ಮುಖ್ಯವಾಗಿ ನಾವು ಗಮನಿಸಬೇಕಾದುದು ಪೋಲೀಸಿನವರು ಆ ಸಂದರ್ಭದಲ್ಲಿ ಸರಿಯಾಗಿ ಯೋಗ್ಯರೀತಿಯಿಂದ ವರ್ತಿಸಿದರೇ ಇಲ್ಲವೇ ಅನ್ನುವುದು

(ಶ್ರೀ ಎಂ. ಎಸ್. ಕೃಷ್ಣನ್)

ನಮಗೀಗ ಬೇಕಾಗಿರುವುದು. ಇನ್ನು ಎರಡನೇಯದಾಗಿ ಆ ಆರ್ಟಿಸ್ಟ್ ಅವರು ತೆಗೆದುಕೊಂಡಿದ್ದ 5,500 ರೂಪಾಯಿ ಅಡ್ವಾನ್ಸನ್ನು ವಾಪಸ್ ಕೊಡುವುದಕ್ಕೆ ಹೋದಾಗ ಕೆ. ಕೆ. ವ ರ್ತಿ ಅವರು ಅದನ್ನು ವಾಪಸ್ ತೆಗೆದುಕೊಳ್ಳುವುದಕ್ಕೆ ತಯಾರಿಲ್ಲ ಎಂದು ಹೇಳಿಲ್ಲವೆ ಎನ್ನುವುದು. ಅದಾದ ನಂತರ ಅವರು ಎರಡು ರಿಜಿಸ್ಟರ್ಡ್ ಲೆಟರುಗಳನ್ನು ಬರೆದಿದ್ದರಂತೆ. ಅದರ ವಿವರಗಳೇನೆಂಬುದನ್ನು ಸಭೆಗೆ ತಿಳಿಸಲಿಲ್ಲ. ಅದಕ್ಕೆ ಪಾರ್ಟಿಯಿಂದ ಉತ್ತರ ಬರಲಿಲ್ಲ ಎಂದು ಹೇಳುತ್ತಿದ್ದಾರೆ. ಅದು ಸರಿಯಾದ್ದೇ ? ಇನ್ನು ಮುಂದೆಯಾದರಿ ಆ ಪಾರ್ಟಿಯನ್ನು ಇವರು ಫೋರ್ಜ್ಡೆಂಟ್ ಎಂದು ಹೇಳುತ್ತಿದ್ದಾರೆ, ಇದರಲ್ಲಿ ಅವರು ಫೋರ್ಜ್ಡೆಂಟಿಯೇ ಅಥವಾ ಇವರು ಫೋರ್ಜ್ಡೆಂಟಿಯೇ ಅಥವಾ ಪೋಲೀಸಿನವರು ಫೋರ್ಜ್ಡೆಂಟಿಯೇ ? ಯಾರು ? ಇದೆಲ್ಲವನ್ನೂ ಇವರು ಸಭೆಗೆ ಸ್ಪಷ್ಟವಾಗಿ ತಿಳಿಸಬೇಕು.

ಶ್ರೀ ಎಚ್. ಡಿ. ದೇವೇಗೌಡ.—ರಾಜ್ಯದ ಮುಖ್ಯ ಮಂತ್ರಿಗಳ ಪರ್ಮಿಷನ್ ಇಲ್ಲದೆ ಇವರು ಹೇಗೆ ಹೊರಗಿನ ಆರ್ಟಿಸ್ಟ್‌ಗಳಿಗೆ ಅಡ್ವಾನ್ಸಾಗಿ 9,750 ರೂಪಾಯಿಗಳನ್ನು ಡ್ರಾಮಾತಿ ಕೊಟ್ಟರು ? ಇದಕ್ಕೆಲ್ಲಾ ಇವರೇಕೆ ವಿವರಗಳನ್ನು ಕೊಡಬಾರದು ?

ಶ್ರೀ ಅಜೀಜ್ ಸೇಟ್.—ಮಾನ್ಯ ಸದಸ್ಯರ ಹೃದಯದಲ್ಲಿ ಯಾವ ಪ್ರಶ್ನೆಯನ್ನು ಕೇಳ ಬೇಕೆಂದಿದ್ದಾರೆ ಎಂಬುದನ್ನು ನಾನು ಹೇಗೆ ತಿಳಿದು ಅಡ್ವಾನ್ಸಾಗಿ ಇಲ್ಲಿ ಉತ್ತರಗಳನ್ನು ತಂದಿಟ್ಟು ಕೊಳ್ಳಬೇಕು ? ಇವರ ಮನಸ್ಸಿನಲ್ಲಿರುವುದನ್ನು ನಾನು ಮೈಕ್ರಾಸ್‌ಕೋಪ್ ಹಾಕಿ ನೋಡಲು ಸಾಧ್ಯವೇ ?

ಶ್ರೀ ವಾಟಾಳ್ ನಾಗರಾಜ್.— ಈಗ ಸಭೆಯಲ್ಲಿ ಮಾನ್ಯ ಮುಖ್ಯ ಮಂತ್ರಿಗಳೂ ಇಲ್ಲ. ಅವರಿಗೆ ಈ ಬಗ್ಗೆ ಎಲ್ಲಾ ವಿಚಾರಗಳೂ ಗೊತ್ತಿದ್ದವು. ಅವರು ತಮ್ಮ ಜವಾಬ್ದಾರಿಯನ್ನು ತಪ್ಪಿಸಿಕೊಳ್ಳಲು ಈಗ ಅವರು ಸಭೆಯನ್ನ ಬಿಟ್ಟು ಹೊರಟುಬಿಟ್ಟಿದ್ದಾರೆ.

ಶ್ರೀ ಎಚ್. ಡಿ. ದೇವೇಗೌಡ.—ನನ್ನ ಹೃದಯದಲ್ಲಿರುವುದನ್ನು ಮೈಕ್ರಾಸ್‌ಕೋಪ್ ಹಾಕಿ ನೋಡಿ ತಿಳಿದುಕೊಳ್ಳಲೇ ಎಂದು ಮಂತ್ರಿಗಳು ಹೇಳುತ್ತಿದ್ದಾರೆ. ನಾನು ಸ್ಪೆಸಿಫಿಕ್ಕಾಗಿ ವಿಷಯ ಕೇಳಿದ್ದರೂ ಅವರು ಹೀಗೆ ಹೇಳತಕ್ಕದ್ದು ಸರ್ವಥಾ ಸರಿಯಾದ್ದಲ್ಲ.

ಶ್ರೀ ಅಜೀಜ್ ಸೇಟ್. - ನಾನು ಈ ಸಭೆಗೆ ಆ ಎಲ್ಲಾ ರೆಕಾರ್ಡುಗಳನ್ನೂ ತರುತ್ತೇನೆ. ಯಾವುದನ್ನೂ ಮುಚ್ಚುಮರೆ ಮಾಡಬೇಕೆಂಬ ಉದ್ದೇಶ ನನಗಿಲ್ಲ. ಸಭೆಯಮುಂದೆ ಎಲ್ಲಾ ವಿಷಯ ಗಳನ್ನು ಇಡುವುದಕ್ಕೆ ನಾನು ತಯಾರಾಗಿದ್ದೇನೆ. ಒಂದುವೇಳೆ ಶ್ರೀ ದೇವೇಗೌಡರೇ ಈ ಸಭೆಯ ನಾಯಕರಾಗಿದ್ದು ನನ್ನ ಜಾಗದಲ್ಲಿ ಅವರಿದ್ದರೆ ಅವರೇನು ಈ ಪ್ರಶ್ನೆಗಳಿಗೆ ಉತ್ತರಕೊಡುತ್ತಿದ್ದರೆಂದು ಕೇಳುತೆನೆ? ಅವರು ನನ್ನನ್ನು ಪಾಪಿ ಎಂದರೆ ಅವರೇನು ಸತ್ಯಹರಿಶ್ಚಂದ್ರರಾ ?

ಶ್ರೀ ವಾಟಾಳ್ ನಾಗರಾಜ್. —ಮಾನ್ಯ ಸಚಿವರು ಎಲ್ಲಾ ದಾಖಲೆಗಳನ್ನೂ ಸಭೆಯ ಮುಂದೆ ಯಾವಾಗ ಇಡುತ್ತಾರೆಂಬುದನ್ನು ಖಚಿತವಾಗಿ ತಿಳಿಸಲಲ್ಲ ಅಲ್ಲವೇ ?

Sri H. D. DEVE GOWDA.—The Hon'ble Minister was pleased to say that he will place all the records on the Table of the House. I welcome that. Let him do that as early as possible.

ಅಧ್ಯಕ್ಷರು. —ಈ ವಿಚಾರದಲ್ಲಿ ಅವರಿಗೆ ಒಂದು ಅಲ್ಟಿಮೇಟಂ ಕೊಡುವುದಕ್ಕೆ ಆಗುತ್ತದೆಯೆ ?

Sri AZEEZ SAIT.—I have to get information from several sources I have to get the accounts audited. After that, I will place it on the Table of the House in a better manner.

MADAM SPEAKER.—The House will now adjourn to meet at 1 P.M. tomarrow.

The House adjourned at Ten Minutes Past Six of the Clock to meet again at One of the Clock on Wednesday, the 6th December **1972.**